Swabhimani Sahakari, Monthly, Posted at GPO-MBC Post Office 560001,
Posting Day 12th. Reg. No. RNP/BGS/2094/20011-13 Licence to post
RNI No.: KARBILO 2004/18001

# ನಿಧಿಗಳ ಸಂಗ್ರಹಣೆ ಅವುಗಳ ವಿನಿಯೋಗ

ಹಣಕಾಸಿನ ನಿರ್ವಹಣೆಯ ದೃಷ್ಟಿಯಿಂದ ಸೂಕ್ತವಾದದ್ದಾಗಿರುತ್ತದೆ.

ಕೇವಲ ಸ್ಥಿರಾಸ್ತಿಗಳ ಮೇಲೆ ಬಹಳಷ್ಟು ಸಾಲಗಳನ್ನು ಮಂಜೂರು ಮಾಡುವ ಬದಲಾಗಿ ಇತರ ಅಲ್ಪಾವಧಿ ಹಾಗೂ ವಸೂಲಿಗೆ ತೊಂದರೆಯಿಲ್ಲದ ಸಾಲಗಳನ್ನು ಕೊಡುವುದರ ಕಡೆಗೆ ಸಹಕಾರಿಗಳು ಗಮನ ಹರಿಸುವುದು ಸೂಕ್ತವಾಗಿರುತ್ತದೆ.

ವ್ಯಾಪಾರಿ ಸರಕುಗಳ ಒತ್ತಿ ಸಾಲ, ಚಿನ್ನ, ಬೆಳ್ಳಿ ಆಭರಣಗಳ ಒತ್ತಿ ಸಾಲ, ರಾಷ್ಟ್ರೀಯ ಉಳಿತಾಯ ಪತ್ರಗಳ ಒತ್ತಿ ಸಾಲ ಇವುಗಳು ಉತ್ತಮ ಮತ್ತು ವಸೂಲಿಗೆ ತೊಂದರೆದಾಯಕವಲ್ಲದ ಸಾಲಗಳಾಗಿದ್ದು ಅವುಗಳ ಕಡೆಗೆ ಬಹಳಷ್ಟು ಸಹಕಾರಿಗಳು



ಗಮನ ಹರಿಸಿಲ್ಲ. ಬಹಳಷ್ಟು ವ್ಯವಹಾರಸ್ಥ ಸದಸ್ಯರಿದ್ದ ಸಂಸ್ಥೆಗಳಲ್ಲಿ ಚಲಾವಣೆಯಲ್ಲಿದ್ದ ಸರಕುಗಳ ಒತ್ತಿ ಮೇಲೆ 3 ರಿಂದ 6 ತಿಂಗಳು ಅವಧಿಗೆ ಸಾಲ ಕೊಟ್ಟಲ್ಲಿ ಅಂತಹ ಸಾಲಗಳು ಅಲ್ಪಾವಧಿಯಲ್ಲಿ ಮರುಪಾವತಿಯಾಗಿ ನಿಶ್ಚಿತ ಆದಾಯವನ್ನು ನಿಯಮಿತವಾಗಿ ಒದಗಿಸುತ್ತವೆ, ಚಿನ್ನ ಮತ್ತು ಬೆಳ್ಳಿ ಆಭರಣಗಳ ಒತ್ತಿ ಮೇಲೆ ಸಾಲ ಕೊಟ್ಟಲ್ಲಿ ಅಂತಹ ಸಾಲಗಳು ಸಹ ಒಂದು ವರ್ಷದೊಳಗೆ ಮರುಪಾವತಿಯಾಗುತ್ತವೆ. ಒಂದು ವೇಳೆ ಮರುಪಾವತಿಯಾಗದೇ ಇದ್ದಲ್ಲಿ ಅಂತಹ ಸುಸ್ತಿ ಸಾಲ ಬಾಕಿಗಳ ವಸೂಲಿಯನ್ನು ಒತ್ತೆಯಿಟ್ಟ ಆಭರಣಗಳನ್ನು ಜಾಹೀರು ಲಿಲಾವದಲ್ಲಿ ಮಾರಾಟ ಮಾಡುವ ಮೂಲಕ ಯಾವುದೇ ತೊಂದರೆಯಿಲ್ಲದೇ ಮಾಡಬಹುದಾಗಿದೆ. ಹಣ ವಾಪಸ್ಸು ಪಡೆಯಲು ಕಡಿಮೆ ಅವಧಿಯಿದ್ದ ರಾಷ್ಟ್ರೀಯ ಉಳಿತಾಯ ಪತ್ರಗಳ ಒತ್ತಿ ಮೇಲೆ ಸಾಲ ಕೊಟ್ಟಲ್ಲಿ ಅಂತಹ ಸಾಲಗಳು ಸುಸ್ತಿ ಬಾಕಿಯಾದರೆ ಯಾವುದೇ ತೊಂದರೆಯಿಲ್ಲದೇ ಸಾಲಗಳ ವಸೂಲಿ ಮಾಡಬಹುದಾಗಿದೆ. ಇಂತಹ ಸಾಲಗಳು ನಿಯಮಿತವಾಗಿ ಗಳಿಕೆಗಳನ್ನು ವಸೂಲಿ ಖರ್ಚುಗಳಿಲ್ಲದೇ ಒದಗಿಸುತ್ತವೆ. ಪಗಾರ ಕಡಿತದ ಒಪ್ಪಂದ ಪತ್ರ ಕೊಡುವ ನೌಕರರಿಗೆ ಸಾಲ ಕೊಟ್ಟಲ್ಲಿ ಅಂತಹ ಸಾಲ ಬಾಕಿಗಳು ಸಹ ಪ್ರತಿ ತಿಂಗಳು ಮಾಸಿಕ ಕಂತುಗಳಲ್ಲಿ ತಿಂಗಳ ಪಗಾರಿನಲ್ಲಿ ಕಡಿತಗೊಂಡು ಸಾಲಗಳು ನಿಯಮಿತವಾಗಿ ವಸೂಲಾಗುತ್ತವೆ. ಇಂತಹ ಸಾಲಗಳಿಗೆ ಸಹಕಾರಿಗಳು ಗಮನ ಹರಿಸಿದರೆ ಸಾಲ ಬಾಕಿಗಳು ಸರಿಯಾಗಿ ವಸೂಲಾಗಿ ವಸೂಲಿ ಪ್ರಮಾಣವು ಯಾವುದೇ ವಸೂಲಿ ಖರ್ಚು ಇಲ್ಲದೇ ಹೆಚ್ಚುತ್ತದೆ. ಹೀಗೆ ಸಹಕಾರಿಗಳು ತಮ್ಮ ಸಾಲ ವ್ಯವಹಾರಗಳನ್ನು ಸರಿಯಾಗಿ ನಿರ್ವಹಿಸಿದರೆ ಸಹಕಾರಿಯ ಹಣಕಾಸಿನ ನಿರ್ವಹಣೆಯು ಉತ್ತಮಗೊಂಡು ಮಂಜೂರು ಮಾಡಿದ ಸಾಲಗಳು ಯಾವುದೇ ತೊಂದರೆಯಿಲ್ಲದೇ ವೇಳೆಗೆ ಸರಿಯಾಗಿ ವಸೂಲಾಗಿ ಸಹಕಾರಿಯು ಉತ್ತಮ ಲಾಭ ಗಳಿಸಲು ಸಾಧ್ಯವಾಗುವುದು.

ಮೇಲೆ ಬರೆದ ಎಲ್ಲ ನಿಧಿಗಳ ಸಂಗ್ರಹಣೆ ಹಾಗೂ ಅವುಗಳ ವಿನಿಯೋಗದ ಎಲ್ಲ ಅಂಶಗಳನ್ನು ಸಹಕಾರಿಗಳು ಚೆನ್ನಾಗಿ ತಿಳಿದುಕೊಂಡರೆ ಹಾಗೂ ಅನುಸರಿಸಿದರೆ ಸಹಕಾರಿಯು ಉತ್ಕೃಷ್ಟವಾದ ಬೆಳವಣಿಗೆಯನ್ನು ಹೊಂದಿ ಹೆಚ್ಚು ಲಾಭಗಳನ್ನು ಪಡೆದು ತನ್ನ ಸದಸ್ಯರಿಗೆ ಇನ್ನೂ ಉತ್ತಮ ಸೇವೆ ಸಲ್ಲಿಸಲು ಅನುಕೂಲವಾಗುತ್ತದೆ ಎಂಬುದರಲ್ಲಿ ಯಾವುದೇ ಸಂದೇಹವಿಲ್ಲ.

ಇವರಿಂದ ಪ್ರಕಟಿತ :
**ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ.,** ನಿರ್ಮಾಣ ಭವನ ಆವರಣ, ಡಾ. ರಾಜಕುಮಾರ ರಸ್ತೆ, (ವಿವೇಕಾನಂದ ಕಾಲೇಜು ಎದುರು)
ಒಂದನೇ ಬ್ಲಾಕ್ ರಾಜಾಜಿನಗರ. ಬೆಂಗಳೂರು - 560010.
ದೂರವಾಣಿ ಸಂಖ್ಯೆಗಳು :
23378375/76/77/78/79/80 ಹಾಗೂ 23474408, 23573291
ಸಂಪಾದಕ, ಪ್ರಕಾಶಕ: **ಶರಣಗೌಡ ಜಿ. ಪಾಟೀಲ,** ಸಂಚಿಕೆ ಸಿದ್ಧತೆ **ವಿ.ಜಿ.ಕಾರಕೂನ**
ಮುದ್ರಣ : ವರ್ಣ ಕಮ್ಯುನಿಕೇಷನ್ಸ್, ಬೆಂಗಳೂರು.

ಆ್ಯಕ್ಸಿಸ್ ಬ್ಯಾಂಕ್ (AXIS BANK) ಯೋಜನೆ

# ಸೌಹಾರ್ದ ಸಹಕಾರಿಗಳ ಮೂಲಕ ಸದಸ್ಯರಿಗೆ ಎ.ಟಿ.ಎಮ್. ಕಾರ್ಡ್ ವಿತರಣೆ

**(AXIS Bank revards cards for co-operatives)**




ರಾಜ್ಯದ ಸೌಹಾರ್ದ ಸಹಕಾರಿಗಳು ಇನ್ನು ಮುಂದೆ ತಮ್ಮ ಸದಸ್ಯರಿಗೆ ವಿಸಾ/ಮಾಸ್ಟರ ಕಾರ್ಡಗಳ ಲೈಸೆನ್ಸ ಮೇಲೆ ವೆಚ್ಚ ಮಾಡದಲೆ ಸುಲಭವಾಗಿ ಕಡಿಮೆ ದರದಲ್ಲಿ ವಿತರಿಸುವ ಯೋಜನೆಯನ್ನು ಜಾರಿಗೊಳಿಸಬಹುದಾಗಿದೆ. ಈ ಬಗ್ಗೆ ಆ್ಯಕ್ಸಿಸ್ ಬ್ಯಾಂಕ್ ನವರು (AXIS BANK) ಯೋಜನೆಯನ್ನು ಸಿದ್ಧಪಡಿಸಿದ್ದು ಈಗಾಗಲೆ ರಾಜ್ಯದ ಶ್ರೀ ಬಸವೇಶ್ವರ ಸೌಹಾರ್ದ ಸಹಕಾರಿ ಸಿಂಧನೂರ,ಶ್ರೀ ಭ್ರಮರಾಂಬ ಪತ್ತಿನ ಸೌಹಾರ್ದ ಸಹಕಾರಿ ನಿ ಗಂಗಾವತಿ, ಶ್ರೀ ಸಿದ್ಧಿ ವಿನಾಯಕ ಸೌಹಾರ್ದ ಸಹಕಾರಿ ಗುಲ್ಬರ್ಗಾ ಮುಂತಾದವರು ಈ ಯೋಜನೆಯನ್ನು ಅಳವಡಿಸಿದ್ದಾರೆ.

ಈ ಯೋಜನೆಯಡಿಯಲ್ಲಿ ಸೌಹಾರ್ದ ಸಹಕಾರಿಗಳು ತಮ್ಮ ಸದಸ್ಯರ ಎಸ್.ಬಿ.ಅಕೌಂಟಿನ ಹಣವನ್ನು ಒಂದು ನಿಗದಿತ ಮೊತ್ತವನ್ನು ರಿವರ್ಡ ಕಾಡಿಗೆ ಹಾಕಬೇಕು. ಸೌಹಾರ್ದ ಸಹಕಾರಿಗಳು ತಮ್ಮ ಸದಸ್ಯರ ಕಾರ್ಡನ ಮೊತ್ತವನ್ನು ಆ್ಯಕ್ಸಿಸ್ ಬ್ಯಾಂಕ್ (AXIS BANK) ನೆಡ್ ಬ್ಯಾಂಕಿನ ಸೌಲಭ್ಯವನ್ನು ಉಪಯೋಗಿಸಿ ಬ್ಯಾಂಕಿಗೆ ತುಂಬಬೇಕು. ಬ್ಯಾಂಕಿನವರು ಸದಸ್ಯರ ಹೆಸರು ಇರುವ ವ್ಯಕ್ತಿಗತ (ಪರ್ಸನಲೈಸಡ್) ಕಾರ್ಡ ಹಾಗೂ ಹಾಗೂ ಸೊಸೈಟಿ ಹೆಸರು ಇರುವ ಕಾರ್ಡ ಹೀಗೆ ಎರಡು ಬಗೆಯ ಕಾರ್ಡನ್ನು ಕೊಡುತ್ತಾರೆ. ಸದಸ್ಯರು ಝಿರೋ ಬ್ಯಾಲನ್ಸ ಮೇಲೆ ಈ ಕಾರ್ಡನ್ನು ಪಡೆಯಬಹುದು. ಸಹಕಾರಿಗೆ ಮತ್ತು ಸದಸ್ಯರಿಗೆ ಉಪಯೋಗವಾಗಬಹುದಾದ ಈ ಯೋಜನೆಯನ್ನು ಸಹಕಾರಿಗಳು ಜಾರಿಮಾಡಲು ತಮ್ಮ ಊರುಗಳಲ್ಲಿರುವ ಆ್ಯಕ್ಸಿಸ್ ಬ್ಯಾಂಕ್ (AXIS BANK) ನವರನ್ನು ಸಂಪರ್ಕಿಸಬಹುದು

ಹೆಚ್ಚಿನ ವಿವರಗಳಿಗೆ for details please contact Miss Niharika Regional Prepaid Cards Head Karnataka & Kerala 9008200447 ಶ್ರೀಮತಿ ನಿಹಾರಿಕಾ ರೀಜನಲ್ ಪ್ರೀಪೇಡ್ ಕಾರ್ಡ ಸೇಲ್ಸ ಹೇಡ್ ಕರ್ನಾಟಕ & ಕೇರಳ ದೂರವಾಣಿ 9008200447 ಹಾಗೂ Shri Santosh Dy manager (cards Manager) 9886992050, ಶ್ರೀ ಸಂತೋಷ ಡೆಪ್ಯುಟಿ ಮ್ಯಾನೇಜರ ಕಾರ್ಡ ಸೇಲ್ಸ ಮ್ಯಾನೇಜರ ದೂರವಾಣಿ 9886992050 ಇವರುಗಳನ್ನು ಸಂಪರ್ಕಿಸಬಹುದಾಗಿದೆ.

ಕೇಂದ್ರ ಕಚೇರಿ ನೂತನ ವಿಳಾಸ :

**ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ.,**

# ನಿರ್ಮಾಣ ಭವನ ಆವರಣ , ಡಾ. ರಾಜಕುಮಾರ ರಸ್ತೆ
(ವಿವೇಕಾನಂದ ಕಾಲೇಜು ಎದುರು)
ಒಂದನೇ ಬ್ಲಾಕ್ ರಾಜಾಜಿನಗರ ಬೆಂಗಳೂರು-560010
ದೂ.ಸಂ : 23378375/76/77/78/79/80 ಹಾಗೂ 23474408, 23573291

**ಸೌಹಾರ್ದ ಸಹಕಾರಿಗಳ ಮಾಹಿತಿಗಾಗಿ ಸಹಕಾರಿಯ ಸಂಪರ್ಕ ದೂರವಾಣಿಗಳು**

| | | |
|---|---|---|
| ಅಧ್ಯಕ್ಷ | ಶ್ರೀ ಎಸ್. ಆರ್. ಸತೀಶಚಂದ್ರ | 9448696108 |
| ಉಪಾಧ್ಯಕ್ಷ | ಶ್ರೀ ಗುರುನಾಥ ಜ್ಯಾಂತಿಕರ | 9448270104 |
| ವ್ಯವಸ್ಥಾಪಕ ನಿರ್ದೇಶಕ | ಶ್ರೀ ಶರಣಗೌಡ ಜಿ. ಪಾಟೀಲ | 9740401685 |
| ಉಪ ಪ್ರಧಾನ ವ್ಯವಸ್ಥಾಪಕ | ಶ್ರೀ ನಾರಾಯಣ ಹೆಗಡೆ | 9480579882 |
| ಉಪ ಪ್ರಧಾನ ವ್ಯವಸ್ಥಾಪಕ | ಶ್ರೀ ವೈ. ಕುಮಾರ | 9845893455 |
| ತರಬೇತಿ ಅಧಿಕಾರಿ | ಶ್ರೀ ವಿ.ಜಿ. ಕಾರಕೂನ | 9482734077 |
| ಬೆಳಗಾವಿ ವಿಭಾಗಾಧಿಕಾರಿ | ಶ್ರೀ ಜಿ.ಎಸ್. ಟೋಪಣ್ಣನವರ್ | 9916367887 |

ಬೆಳಗಾವಿ ವಿಭಾಗೀಯ ಕಛೇರಿಯ ವಿಳಾಸ : ನಂ.436, ಹುಯಿಲುಗೋಳ ಕಾಂಪ್ಲೆಕ್ಸ್, ಶೆರಿಗಲ್ಲಿ, ಬೆಳಗಾವಿ – 1. ದೂ. 0831–2401551

ದಶಮಾನೋತ್ಸವ ವರ್ಷ

# ಸ್ವಾಭಿಮಾನಿ ಸಹಕಾರಿ

ಸೌಹಾರ್ದ ಸಹಕಾರಿ ಚಳುವಳಿಯ ಅಭಿವೃದ್ಧಿಗೆ ಮೀಸಲಾಗಿರುವ ಏಕೈಕ ಮಾಸಪತ್ರಿಕೆ

ಸ್ವಾಯತ್ತತೆ,
ಸ್ವಯಂ ಆಡಳಿತ,
ಸ್ವಯಂ ನಿಯಂತ್ರಣ
ನಮ್ಮ ಧ್ಯೇಯ

ಸಂಪುಟ 8 : ಸಂಚಿಕೆ 6 : ಜೂನ್ 2011 : * ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿಯಮಿತ * ವಾರ್ಷಿಕ ಚಂದಾ 50/- : ಬೆಲೆ ₹ 5

## ರಾಜ್ಯಕ್ಕೆ ಮುಂಗಾರು ಸಕಾಲಿಕ ಆಗಮನ

# ರೈತರಿಗೆ ಸಂತಸ

## ಸಮಸ್ತ ಜನತೆಗೆ ಸಮೃದ್ಧಿಯ ಶುಭ ಹಾರೈಕೆ

ಶ್ರೀ ಎಸ್. ಆರ್. ಸತೀಶಚಂದ್ರ
ಅಧ್ಯಕ್ಷರು

ಶ್ರೀ ಗುರುನಾಥ ಜ್ಯಾಂತೀಕರ
ಉಪಾಧ್ಯಕ್ಷರು




ಒಳಪುಟಗಳಲ್ಲಿ...

ಅಧ್ಯಕ್ಷರ ನುಡಿ..........2
ಸೌಹಾರ್ದ ಸಹಕಾರಿಗಳ ಸಮಾಚಾರಗಳು..........3,4
ಸೌಹಾರ್ದ ಸಹಕಾರಿಗಳ ಛಾಯಚಿತ್ರಗಳು..........5,6
ಲೇಖನ..........7,8,9
ನಿಮ್ಮ ಪ್ರಶ್ನೆ ನಮ್ಮ ಉತ್ತರ..........10,11
ಶಾಸನ ಬದ್ಧ ಲೆಕ್ಕ ಪರಿಶೋಧನೆ..........14,15,16

ಸೌಹಾರ್ದ ಸಹಕಾರಿಗಳ ಸಂಖ್ಯೆ : 1684 - 'ಇ' ಸ್ಟಾಂಪಿಂಗ್ ಕೇಂದ್ರಗಳ ಸಂಖ್ಯೆ - 365

# ಅಧ್ಯಕ್ಷರ ನುಡಿ....



ಎಸ್.ಆರ್. ಸತೀಶಚಂದ್ರ

## ಪಾರದರ್ಶಕ ಹಾಗೂ ವೃತ್ತೀಕೃತ ಆಡಳಿತಕ್ಕೆ ಪ್ರಥಮ ಆದ್ಯತೆ ಅವಶ್ಯಕ

Transparent and Proffessional Management

ರಾಜ್ಯದ ಸಹಕಾರಿ ಕ್ಷೇತ್ರದಲ್ಲಿ ಹೊಸ ಅದ್ಯಾಯವನ್ನು ಪ್ರಾರಂಭಿಸಿರುವ, ಸಹಕಾರಿ ಕ್ಷೇತ್ರದಲ್ಲಿ ಅಭಿವೃಧ್ಧಿಯ ಅಲೆಯನ್ನು ಎಬ್ಬಿಸಿರುವ, ಸಹಕಾರಿ ಕ್ಷೇತ್ರಕ್ಕೆ ಆರ್ಥಿಕ ಸಂಘಟನೆಯ ನೆಲೆಯಾಗಿ ಮಾದರಿಯಾಗಿ ಕಾರ್ಯನಿರ್ವಹಿಸುತ್ತಿರುವ ಈ ಸೌಹಾರ್ದ ಸಹಕಾರಿ ಕ್ಷೇತ್ರ ಇನ್ನೂ ಹೆಚ್ಚಿನ ಉಜ್ವಲ ಭವಿಷ್ಯದತ್ತ ಸಾಗಬೇಕಿದೆ. ಸಹಕಾರಿ ಕ್ಷೇತ್ರದ ಇತರರಿಗೆ ಸದಾಕಾಲ ಮಾದರಿ ವ್ಯವಸ್ಥೆಯಾಗಿ ಕಾರ್ಯನಿರ್ವಹಿಸಬೇಕೆಂದು ಸಂಯುಕ್ತ ಸಹಕಾರಿಯ ಅಪೇಕ್ಷೆಯಾಗಿದೆ. ಸೌಹಾರ್ದ ಸಹಕಾರಿ ಕ್ಷೇತ್ರದ ದಶಮಾನೋತ್ಸವ ಆಚರಣೆಯ ಅಂಗವಾಗಿ ಎಲ್ಲ ಸೌಹಾರ್ದ ಸಹಕಾರಿ ಆಡಳಿತದಲ್ಲಿ ಪಾರದರ್ಶಕತೆ ಹಾಗೂ ವೃತ್ತಿಕೃತ ರೂಢಿಸಿಕೊಂಡು ಇತರರಿಗೆ ಮಾದರಿಯಾಗಿ ಕಾರ್ಯನಿರ್ವಹಿಸುವುದು ಆದ್ಯತೆಯಾಗಬೇಕು ಎಂದು ಸಂಯುಕ್ತ ಸಹಕಾರಿಯು ಅಪೇಕ್ಷಿಸುತ್ತದೆ.

ರಾಜ್ಯದಲ್ಲಿ ಸೌಹಾರ್ದ ಸಹಕಾರಿ ಕಾಯ್ದೆ ಜಾರಿಯಾದಾಗಿನಿಂದ ಇದುವರೆಗೆ 1684 ಸೌಹಾರ್ದ ಸಹಕಾರಿಗಳು ನೊಂದಣಿಯಾಗಿ ಪರಿವರ್ತನೆಯಾಗಿ ಉತ್ತಮವಾಗಿ ಕಾರ್ಯನಿರ್ವಹಿಸುತ್ತಿರುವುದು ರಾಜ್ಯ ಸರಕಾರ ಹಾಗೂ ಸಾರ್ವಜನಿಕರ ಮೆಚ್ಚುಗೆಗೆ ಪಾತ್ರವಾಗಿರುವುದು ಹೆಮ್ಮೆಯ ವಿಷಯ.ಆದಾಗ್ಯೂ ಸಹ ಇನ್ನೂ ಕೆಲವು ಸುಧಾರಣೆಗಳು ಅಗತ್ಯವೆನಿಸುತ್ತದೆ.

ನಾನು ಹಾಗೂ ಉಪಾಧ್ಯಕ್ಷರು ಮತ್ತು ಅನೇಕ ನಿರ್ದೆಶಕರು ರಾಜ್ಯಾದ್ಯಂತ ಸಂಯುಕ್ತ ಸಹಕಾರಿಗಳು ನಡೆಸುತ್ತಿರುವ ತರಬೇತಿ ಕಾರ್ಯಕ್ರಮಗಳಲ್ಲಿ ಅವಲೋಕನಾ ಸಭೆಗಳಲ್ಲಿ ಭಾಗವಹಿಸಲು ಪ್ರವಾಸ ಕೈಗೊಂಡ ಸಂದರ್ಭಗಳಲ್ಲಿ ಅಲ್ಲಿನ ಸೌಹಾರ್ದ ಸಹಕಾರಿಗಳಿಗೆ ಭೇಟಿ ನೀಡುವುದು ನನ್ನದೊಂದು ಅಭ್ಯಾಸ. ಹೀಗೆ ಸೌಹಾರ್ದ ಸಹಕಾರಿಗಳಿಗೆ ಭೇಟಿ ನೀಡಿದ ಸಂದರ್ಭಗಳಲ್ಲಿ ಅನೇಕ ಸೌಹಾರ್ದ ಸಹಕಾರಿಗಳಲ್ಲಿ ಉತ್ತಮ ಅಂಶಗಳನ್ನು ಗಮನಿಸಿದ್ದೇನೆ. ಅದರಂತೆ ಕೆಲವು ದೋಷಗಳು ಗಮನಕ್ಕೆ ಬಂದಿವೆ. ಹಾಗೆಯೆ ನಮ್ಮ ಅಧಿಕಾರಿಗಳು ಸೌಹಾರ್ದ ಸಹಕಾರಿಗಳ ಭೇಟಿ ನೀಡಿದಾಗ ಮತ್ತು ಸೌಹಾರ್ದ ಸಹಕಾರಿಗಳ ಲೆಕ್ಕ ಪರಿಶೋಧಿತ ವರದಿಗಳನ್ನು ಅವಲೋಕಿಸಿ ಅನೇಕ ಲೋಪದೋಷಗಳನ್ನು ಗಮನಿಸಿದ್ದಾರೆ. ಸಂಯುಕ್ತ ಸಹಕಾರಿಯ ಆಡಳಿತ ಮಂಡಳಿಯ ಗಮನಕ್ಕೆ ತಂದಿದ್ದಾರೆ.

**ಇದು ಸ್ಪರ್ಧಾತ್ಮಕ ಪ್ರಪಂಚ. ಇಲ್ಲಿ ಎಲ್ಲವನ್ನೂ ವೈಜ್ಞಾನಿಕವಾಗಿ ಯೋಚಿಸಿ ಕಾರ್ಯಯೋಜನೆಯನ್ನು ಸಿದ್ಧಪಡಿಸಿ ಅನುಷ್ಠಾನಗೊಳಿಸಿದರೆ ಮಾತ್ರ ಯಶಸ್ಸು ಸಾಧ್ಯ.ಆದ್ದರಿಂದ ಸೌಹಾರ್ದ ಸಹಕಾರಿಗಳೂ ಇದಕ್ಕೆ ಹೊರತಾಗಬಾರದು. ನಮ್ಮ ಯಶಸ್ಸು ನಮ್ಮ ಕೈಯಲ್ಲಿಯೆ ಇದೆ. ಉತ್ತಮ ಕಾರ್ಯಯೋಜನೆ ಹಾಗೂ ಪರಿಣಾಮಕಾರಿ ನಿರ್ವಹಣೆ ಅಗತ್ಯ.**

ಸೌಹಾರ್ದ ಸಹಕಾರಿಗಳು ಈ ಲೋಪದೋಷಗಳಿಂದ ಮುಕ್ತವಾಗಬೇಕಾದರೆ ಒಂದು ಕಾರ್ಯಯೋಜನೆಯನ್ನು ಹಾಕಿಕೊಳ್ಳುವುದು ಅಗತ್ಯ. ವಿಶೇಷವಾಗಿ ಸೌಹಾರ್ದ ಸಹಕಾರಿಯ ಆಡಳಿತ ಪಾರದರ್ಶಕವಾಗಿರಬೇಕು. (Transperent Management) ಯಾವುದೇ ಒಬ್ಬ ವ್ಯಕ್ತಿಯ, ಸಮಾಜದ ಅಥವಾ ಕೋಮಿನ ಹಿಡಿತಕ್ಕೆ ಸಹಕಾರಿಯು ಇರಬಾರದು. ಅದೊಂದು ಸಾರ್ವಜನಿಕರ ಸಂಸ್ಥೆ. ಸಮಾಜದ ಎಲ್ಲ ವರ್ಗದ ಜನರಿಗೆ ಸಹಕಾರಿಯ ಎಲ್ಲ ಸೌಲಭ್ಯಗಳು ಮುಕ್ತವಾಗಿ ದೊರಕುವ ವ್ಯವಸ್ಥೆಯನ್ನು ಸಹಕಾರಿಯು ಮಾಡಬೇಕಾಗುತ್ತದೆ.

ಸಹಕಾರಿಯಲ್ಲಿ ವೃತ್ತೀಕೃತ ಆಡಳಿತ (Proffessional Management) ವ್ಯವಸ್ಥೆಯನ್ನು ಅಳವಡಿಸಬೇಕು. ಸಹಕಾರಿ ತತ್ವಗಳ ಅಡಿಯಲ್ಲಿ ಜಾಗೃತ ಹಾಗೂ ನುರಿತ ಸದಸ್ಯರಿಗೆ ಆಡಳಿತ ಮಂಡಳಿಯಲ್ಲಿ ಕಾರ್ಯನಿರ್ವಹಿಸಲು ಅವಕಾಶ ಮಾಡಿಕೊಡಬೇಕು. ಸಹಕಾರಿಯ ಕೆಲಸ ಕಾರ್ಯಗಳ ವಿಭಾಗವಾರು ಕಾರ್ಯನಿರ್ವಹಣೆಯ ವಿವರ ಹಾಗೂ ಅಧಿಕಾರಿಗಳು ನಿರ್ವಹಿಸಬೇಕಾದ ಕೆಲಸಗಳ ಪಟ್ಟಿಯು ಅಗತ್ಯ. (Section wise work and indivisual job chart) ಅಧಿಕಾರಿಗಳ ಹಾಗೂ ಸಿಬ್ಬಂದಿಯವರ ನೇಮಕ ಮಾಡುವಾಗ ಅರ್ಹ ವಿದ್ಯಾಭ್ಯಾಸ ಹಾಗೂ ಅವರ ಅನುಭವಗಳಿಗೆ ಮೊದಲ ಆದ್ಯತೆಯಿರಬೇಕು. ಅವರ ಕರ್ತವ್ಯ ಹಾಗೂ ಜವಾಬ್ದಾರಿಯನ್ನು ವೈಜ್ಞಾನಿಕವಾಗಿ ನಿಗದಿಪಡಿಸಬೇಕು. ಕಾಲಕಾಲಕ್ಕೆ ಅಗತ್ಯ ತರಬೇತಿ ನೀಡಿ ಪರಿಣಿತರನ್ನಾಗಿಸಬೇಕು. ಕಾಲಕಾಲಕ್ಕೆ ಅವರ ಕೆಲಸದ ಪ್ರಗತಿ ಪರಿಶೀಲನೆ ನಡೆಸಿ ಅವರ ಕಾರ್ಯದ ಬಗ್ಗೆ ಮೆಚ್ಚುಗೆ ಸೂಚಿಸುವ ಹಾಗೂ ಅವರಲ್ಲಿ ಕ್ರೀಯಾಶೀಲತೆಯನ್ನು ಹೆಚ್ಚಿಸುವಂತಹ ಸಲಹೆ ಹಾಗೂ ಮಾರ್ಗದರ್ಶನಗಳನ್ನು ನೀಡುವ ವ್ಯವಸ್ಥೆ ಅಳವಡಿಸುವುದು ಅಗತ್ಯ.

■

ಮಾಡಿದ್ದು ತಿಳಿದು ಬಂದಿದೆ. ಯಾವುದೇ ಹೂಡಿಕೆಗಳು ಕಾನೂನು ಬದ್ಧವಾಗದೇ ಇದ್ದಲ್ಲಿ ಅಂತಹ ಹೂಡಿಕೆಗಳ ಹಣ ಸಂಸ್ಥೆಗೆ ವಾಪಸ್ಸು ಬರದೇ ಇದ್ದ ಪಕ್ಷದಲ್ಲಿ ನಿರ್ದೇಶಕ ಮಂಡಳಿಯು ಸಾಮಾನ್ಯ ಸಭೆಗೆ ನೇರ ಜವಾಬ್ದಾರರಾಗುತ್ತಾರೆ. ಯಾವುದೇ ಬ್ಯಾಂಕುಗಳಲ್ಲಿ ಹಣ ಹೂಡಿಕೆ ಮಾಡಿದರೂ ಸಹ ಅಂತಹ ಸಂಸ್ಥೆಯು ಆರ್ಥಿಕವಾಗಿ ಬಲಿಷ್ಟವಾಗಿರದೆ ಇದ್ದಲ್ಲಿ (ಅಂದರೆ ಅಂತಹ ಸಂಸ್ಥೆಗಳ ಅನುತ್ಪಾದಕ ಆಸ್ತಿಗಳು (Non Performing Assets) ಹೆಚ್ಚಾಗಿದ್ದಲ್ಲಿ, ಸುಸ್ತಿ ಬಾಕಿಗಳು ವಸೂಲಾಗದೇ ಹೆಚ್ಚಾಗುತ್ತ ಸಾಗಿದ್ದಲ್ಲಿ, ಸಂಸ್ಥೆಯು ನಷ್ಟ ಅನುಭವಿಸುತ್ತ ಸಾಗಿ ಅಂತಹ ನಷ್ಟದ ಪ್ರಮಾಣ ಬೆಳೆಯುತ್ತ ಹೋಗಿದ್ದಲ್ಲಿ ಭಾರತೀಯ ರಿಜರ್ವ ಬ್ಯಾಂಕಿನವರು ಅಂತಹ ಸಂಸ್ಥೆಯ ಬಗ್ಗೆ ಉತ್ತಮ ಅಭಿಪ್ರಾಯ ಹೊಂದದೆ ಇದ್ದಲ್ಲಿ) ಅಂತಹ ಸಂಸ್ಥೆಯಲ್ಲಿ ಮಾಡಿದ ಹೂಡಿಕೆಗಳ ಮರುಪಾವತಿಗೆ ನಿರ್ದೇಶಕ ಮಂಡಳಿಯು ಚಿಂತಿಸಬೇಕಾಗುವುದು.

ಸರ್ಕಾರಿ ಸ್ವಾಮ್ಯದ ಬ್ಯಾಂಕುಗಳು, ಸರ್ಕಾರಿ ಹಾಗೂ ಟ್ರಸ್ಟಿ ಭದ್ರತೆಗಳಲ್ಲಿ ಇಟ್ಟಿರುವ ಹೂಡಿಕೆಗಳು ಯಾವುದೇ ವಿಚಾರಣೆಗೆ ಹಾಗೂ ಸಂಶಯಾಸ್ಪದಕ್ಕೆ ಪಾತ್ರವಾಗುವುದಿಲ್ಲ. ಮ್ಯೂಚುಅಲ್ ಫಂಡಗಳಲ್ಲಿ ಹಣ ಹೂಡಿಕೆಗೆ ಪ್ರತಿ ವರ್ಷ ಉತ್ಪನ್ನಗಳು ನಿಯಮಿತವಾಗಿ ಬರುವುದಿಲ್ಲ ಹಾಗೂ ಮೂಲತಃ ಮ್ಯೂಚುಅಲ್ ಫಂಡ ಹೂಡಿಕೆಗಳ ಭವಿಷ್ಯ, ಏಳ್ಗೆ ಹಾಗೂ ಇಳಿತ ಇವುಗಳು ಶೇರು ಪೇಟೆ ದರಗಳಿಗೆ ಒಳಪಟ್ಟಿರುತ್ತವೆ. ಆದ್ದರಿಂದ ಇಂತಹ ಹೂಡಿಕೆಗಳು ಸಂಸ್ಥೆಗೆ ಸುಭದ್ರ ಹೂಡಿಕೆಗಳಾಗುವುದಿಲ್ಲ. ಅವುಗಳಲ್ಲಿ ಹಣ ವಾಪಸ್ಸು ಪಡೆಯುವುದು ಕೆಲಕಾಲ ಹೆಚ್ಚಿಗೆ ಗಂಡಾಂತರವಾಗಲೂಬಹುದು. ಒಂದು ವೇಳೆ ಹಣ ವಾಪಸ್ಸು ಪಡೆದಲ್ಲಿ ನಷ್ಟವೂ ಸಹ ಆಗಬಹುದು. ಹೀಗಾಗಿ ಕಾನೂನು ವ್ಯತಿರಿಕ್ತವಾಗಿ ಮಾಡುವ ಇಂತಹ ಹೂಡಿಕೆಗಳು ಸಮಾಧಾನಕಾರಕ, ಲಾಭದಾಯಕ ಹೂಡಿಕೆಗಳು ಆಗಲಾರವು. ಈ ವಿಷಯವನ್ನು ಎಲ್ಲ ಸಹಕಾರಿಗಳು ಗಮನದಲ್ಲಿ ಇರಿಸಬೇಕಾಗಿದೆ. ಯಾವುದೇ ಕಾಲಕ್ಕೆ ಹಾಗೂ ಯಾವುದೇ ಪ್ರಸಂಗದಲ್ಲಿ ದ್ರವ್ಯಾಸ್ತಿ ರೂಪದಲ್ಲಿ ಇಟ್ಟಿರುವ ಹಣವನ್ನು ಸಾಲ ವ್ಯವಹಾರಕ್ಕೆ ಉಪಯೋಗಿಸಬಾರದು.

ಸಹಕಾರಿಗಳು ಠೇವುಗಳ ಮೇಲೆ ಬಡ್ಡಿ ದರ ನಿಗದಿಪಡಿಸುವಾಗ ಸ್ಥಾನಿಕ ಬ್ಯಾಂಕುಗಳ ಬಡ್ಡಿ ದರಗಳನ್ನು ಹಾಗೂ ಸಹಕಾರಿ ಸಂಘ, ಸೌಹಾರ್ದ ಸಹಕಾರಿಗಳು ಠೇವುಗಳ ಮೇಲೆ ಕೊಡುವ ಬಡ್ಡಿ ದರಗಳನ್ನು ಗಣನೆಗೆ ತೆಗೆದುಕೊಳ್ಳಬೇಕು. ಎಲ್ಲ ಕಾಲಕ್ಕೂ ಹೆಚ್ಚಿಗೆ ಬಡ್ಡಿ ದರ ನಿಗದಿಪಡಿಸಿದರೆ ಹೆಚ್ಚು ಠೇವು ಬರುತ್ತದೆ ಎಂಬುದು ಹೇಳಲಿಕ್ಕಾಗದು. ಠೇವುದಾರರು ತಮ್ಮ ಹಣ ಹೂಡಿಕೆ ಮಾಡುವಾಗ ಬಡ್ಡಿ ದರಗಳನ್ನು ಅಷ್ಟೇ ಗಣನೆಗೆ ತೆಗೆದುಕೊಳ್ಳದೇ ಸಂಸ್ಥೆಯು ಸ್ಥಾನಿಕವಾದುದ್ದರಿಂದ ಅದರ ಆಡಳಿತ, ನಿರ್ದೇಶಕ ಮಂಡಳಿಯ ಸದಸ್ಯರುಗಳು ಹಾಗೂ ಅವರು ಸಾರ್ವಜನಿಕ ಜೀವನದಲ್ಲಿ ಪಡೆಯುತ್ತಿರುವ ಮಾನ ಮರ್ಯಾದೆ ಹಾಗೂ ಅವರ ಘನತೆ ಗೌರವ ಅಲ್ಲದೇ ಸಹಕಾರಿಯಲ್ಲಿ ಕೆಲಸ ಮಾಡುವ ನೌಕರರು ಹೊಂದಿದ ಸ್ವಭಾವ ಹಾಗೂ ಅವರ ಸಾರ್ವಜನಿಕ ಜೀವನದಲ್ಲಿ ಹೊಂದಿದ ನಡೆನುಡಿ, ಸಹಕಾರಿಯು ಮಾಡುತ್ತಿರುವ ಲಾಭಗಳು, ಅನುಭವಿಸುತ್ತಿರುವ ನಷ್ಟಗಳು, ಸಾಲಗಳ ವಸೂಲಿಗಳು, ಸಂಸ್ಥೆಯು ಹೊಂದಿದ ಮುಂಧೋರಣೆಗಳನ್ನು ಎಲ್ಲವನ್ನು ಅಭ್ಯಸಿಸಿ ಠೇವು ಇಡುವ ಬಗ್ಗೆ ನಿರ್ಣಯಿಸುತ್ತಾರೆ. ನಿರ್ದೇಶಕರ ಹಾಗೂ ನೌಕರರ ಸಂಬಂಧಿಕರು ಹಾಗೂ ಸ್ನೇಹಿತರು ಇವರು ಮಾಡುವ ಠೇವುಗಳು ಈ ವಿಷಯದಲ್ಲಿ ಹಾಗೂ ವಿಚಾರದಲ್ಲಿ ಅಪವಾದಾತ್ಮಕವಾಗಬಹುದು.

ಹೊಸದಾಗಿ ಪ್ರಾರಂಭಗೊಂಡ ಸಹಕಾರಿಯು ಹೆಚ್ಚಿನ ಬಡ್ಡಿ ದರಗಳನ್ನು ಠೇವುಗಳ ಮೇಲೆ ನಿಗದಿಪಡಿಸಿದರೆ ಕೆಲವು ದಿವಸಗಳ ಮಟ್ಟಿಗೆ ಠೇವುಗಳು ಪ್ರಾರಂಭದಲ್ಲಿ ಮಾತ್ರ ಹೆಚ್ಚಿಗೆ ಬರಬಹುದು. ಆದರೆ ಉತ್ತಮ ಕೆಲಸ ಮಾಡುವ ಸಹಕಾರಿಯು ಅದಕ್ಕಿಂತ ಕಡಿಮೆ ಬಡ್ಡಿ ದರಗಳನ್ನು ನಿಗದಿಪಡಿಸಿದರೂ ಸಹ ಅವರು ಹೊಂದಿದ ಠೇವುಗಳ ಪ್ರಮಾಣ ಕಡಿಮೆಯಾಗಲಾರದು. ಹೆಚ್ಚಿಗೆ ಬಡ್ಡಿ ದರಗಳನ್ನು ಠೇವುಗಳ ಮೇಲೆ ನಿಗದಿಪಡಿಸಿದಲ್ಲಿ ಸಾಲಗಳ ಮೇಲೆ ಹೆಚ್ಚಿನ ಮಟ್ಟದ ಬಡ್ಡಿ ದರಗಳನ್ನು ಆಕರಿಸಬೇಕಾಗುತ್ತದೆ. ಠೇವುಗಳ ಹಾಗೂ ಸಾಲಗಳ ಮೇಲಿನ ಬಡ್ಡಿದರಗಳಲ್ಲಿ ಆಡಳಿತ ಖರ್ಚುಗಳನ್ನು ಭರಿಸುವ ಸಲುವಾಗಿ ಕನಿಷ್ಠ 3–4 ಪ್ರತಿಶತದಷ್ಟು ಅಂತರ ಇಟ್ಟುಕೊಂಡು ಸಾಲಗಳ ಮೇಲೆ ಬಡ್ಡಿದರಗಳನ್ನು ನಿಗದಿಪಡಿಸಬೇಕಾಗುತ್ತದೆ. ಕೊನೆಗೆ ಸಾಲಗಳ ಮೇಲೆ ಬಡ್ಡಿದರಗಳು ಹೆಚ್ಚಿನ ಪ್ರಮಾಣದಲ್ಲಿ ಆದಲ್ಲಿ ಸಾಲಗಳನ್ನು ಪಡೆಯಲು ಉತ್ತಮ ಗ್ರಾಹಕರು ಸಹಕಾರಿಗೆ ಸಂಪರ್ಕಿಸಲಾರರು. ಹೀಗಾಗಿ ಸಾಲಗಳನ್ನು ಅಷ್ಟು ಉತ್ತಮವಲ್ಲದ (ಅಷ್ಟೊಂದು ಒಳ್ಳೆಯ ಆರ್ಥಿಕ ಸ್ಥಿತಿ, ಘನತೆ ಗೌರವ ಇರದ ವ್ಯಕ್ತಿಗಳು) ಸದಸ್ಯರಿಗೆ ಮಂಜೂರು ಮಾಡಿದಲ್ಲಿ ಸರಿಯಾದ ವೇಳೆಗೆ ಸಾಲ ಮರುಪಾವತಿಗಳು ಆಗುವ ಪ್ರಮಾಣ ಕಡಿಮೆಯಾಗುವುದು ಇದರಿಂದ ಸುಸ್ತಿ ಸಾಲಗಳು ಬೆಳೆಯಬಹುದಾಗಿದೆ. ಇವೆಲ್ಲವುಗಳನ್ನು ತಪ್ಪಿಸಲು ಸ್ಥಾನಿಕ ಹಾಗೂ ಉತ್ತಮ ಆರ್ಥಿಕ ಸಂಸ್ಥೆಗಳು ಕೊಡುವ ಸಾಲಗಳ ಬಡ್ಡಿದರಗಳ ಜೊತೆಗೆ ಸರಿ ಸಮಾನ ಅಥವಾ ಸಾಧ್ಯವಾದಲ್ಲಿ ಕಡಿಮೆ ಬಡ್ಡಿದರಗಳನ್ನು ನಿಗದಿಪಡಿಸಿದಲ್ಲಿ ಉತ್ತಮ ಸಾಲಗಾರ ಸದಸ್ಯರು ಸಾಲ ಪಡೆಯಲು



ಸಂಸ್ಥೆಗೆ ಸಂಪರ್ಕಿಸುವರು. ಹೀಗಾದಲ್ಲಿ ಸಾಲ ವ್ಯವಹಾರಗಳು ಸುರುಳಿತಗೊಳ್ಳುವವು. ಇವೆಲ್ಲವುಗಳನ್ನು ಗಣನೆಗೆ ತೆಗೆದುಕೊಂಡು ಠೇವುಗಳ ಹಾಗೂ ಸಾಲಗಳ ಮೇಲೆ ಬಡ್ಡಿ ದರಗಳನ್ನು ನಿಗದಿಪಡಿಸಬೇಕು. ಇದರಲ್ಲಿ ಆಡಳಿತ ಮಂಡಳಿಯ ಹಾಗೂ ವ್ಯವಸ್ಥಾಪಕರ ಪಾತ್ರಗಳು ಬಹಳ ಮಹತ್ವದ್ದಾಗಿರುತ್ತದೆ.

ಸಂಸ್ಥೆಯು ಹೊಂದಿದ ಒಟ್ಟು ನಿಧಿಗಳಲ್ಲಿ (ಬಂಡವಾಳದಲ್ಲಿಯ) ಠೇವುಗಳ ಮೇಲೆ 80 ಪ್ರತಿಶತದಷ್ಟು ಆಗುವ ಹಣವು, ಶೇರು ಬಂಡವಾಳ ಹಾಗೂ ಕಾಯ್ದಿಟ್ಟ ನಿಧಿಯಷ್ಟು ಆಗುವ ಪೂರ್ತಿ ರಕ್ಕಮನ್ನು, ಸಾಲ ಪಡೆದಲ್ಲಿ ಪೂರ್ತಿ ಸಾಲದ ರಕ್ಕಮನ್ನು ಸಹಕಾರಿಯು ತನ್ನ ಸಾಲ ವ್ಯವಹಾರದಲ್ಲಿ ವಿನಿಯೋಗಿಸುವ ಅಧಿಕಾರ ಹೊಂದಿರುತ್ತದೆ. ಇತ್ತಿತ್ತಲಾಗಿ ಬಹಳಷ್ಟು ಹೊಸ ಸೌಹಾರ್ದ ಸಹಕಾರಿಗಳ ಲೆಕ್ಕಪರಿಶೋಧನಾ ವರದಿಗಳನ್ನು ಪರಿಕ್ಷೀಸಲಾಗಿ ಬಹಳಷ್ಟು ಸಹಕಾರಿಗಳು ತಮಗೆ ಅಧಿಕಾರ ಹಾಗೂ ಅವಕಾಶವಿದ್ದ ನಿಧಿಗಳನ್ನು ಸಮರ್ಪಕವಾಗಿ ಬಳಸಿಕೊಳ್ಳದೇ ಇದ್ದದ್ದು ಹಾಗೂ ಇನ್ನೂ ಕೆಲವು ಸಹಕಾರಿಗಳು ತಮಗೆ ಇದ್ದ ಅಧಿಕಾರಕ್ಕಿಂತ ಹೆಚ್ಚಿಗೆ ಹಣವನ್ನು ಸಾಲ ರೂಪದಲ್ಲಿ ಮಂಜೂರು ಮಾಡಿದ್ದು ಕಂಡು ಬಂದಿದೆ. ಎಷ್ಟೋ ಸಹಕಾರಿಗಳು ತಮಗೆ ಸಾಲ ಕೊಡಲು ಇದ್ದ ಅಧಿಕಾರದ ಹಣದ 70 ರಿಂದ 80 ಪ್ರತಿಶತದ ವರೆಗೆ ಇನ್ನೂ ಕೆಲವೊಂದು ಸಹಕಾರಿಗಳು ಪೂರ್ತಿ ಹಣವನ್ನು ಜಾಮೀನು ಸಾಲಗಳ ರೂಪದಲ್ಲಿ ಸದಸ್ಯರಿಗೆ ಸಾಲ ಹಂಚಿದ್ದು ತಿಳಿದು ಬಂದಿದೆ.

ಜಾಮೀನು ಸಾಲಕ್ಕೆ ಯಾವುದೇ ಭದ್ರತೆಯನ್ನು ಪಡೆಯಲಾಗುವುದಿಲ್ಲ. ಅಂತಹ ಸಾಲಗಳು ಸುಸ್ತಿ ಬಾಕಿಯಾದಲ್ಲಿ ಸಾಲ ವಸೂಲಿ ಮಾಡುವುದು ಬಹಳಷ್ಟು ತೊಂದರೆದಾಯಕವಾಗಿರುತ್ತದೆ. ಆದರೆ ಭದ್ರತೆ ತೆಗೆದುಕೊಂಡ ಸಾಲಗಳ ವಿಷಯದಲ್ಲಿ ಅಂತಹ ಸಾಲಗಳು ಸುಸ್ತಿಯಾದಾಗ ಭದ್ರತೆಯನ್ನು ಮಾರಾಟ ಮಾಡಿ ಸಾಲ ವಸೂಲಿ ಮಾಡಬಹುದಾಗಿದೆ. ಸ್ಥಿರಾಸ್ತಿಯಂತಹ ಭದ್ರತೆಯನ್ನು ಸಾಲಕ್ಕೆ ಭದ್ರತೆಯಾಗಿ ಪಡೆದುಕೊಂಡರೂ ಸಹ ಅಂತಹ ಭದ್ರತೆಯನ್ನು ಸುಸ್ತಿ ಸಾಲ ವಸೂಲಿ ಮಾಡಲು ಮಾರಾಟ ಮಾಡಲು ಹೋದಾಗ ಎಷ್ಟೋ ಸಲ ಬಹಳಷ್ಟು ಕಾನೂನು ಅಡಚಣೆಗಳು ಒದಗಿ ಸಾಲ ವಸೂಲಿಯು ಅಪೇಕ್ಷಿತ ಸಮಯದಲ್ಲಿ ಆಗುವುದಿಲ್ಲ. ಇನ್ನೂ ಅನೇಕ ಸಹಕಾರಿಗಳು ಜಾಮೀನು ಸಾಲದ ಜೊತೆಗೆ ಸ್ಥಿರಾಸ್ತಿ ಸಾಲಗಳನ್ನು, ಸೋಲಾರ ಸಾಲಗಳನ್ನು, ಠೇವು ಸಾಲಗಳನ್ನು ಮಂಜೂರು ಮಾಡಿರುವುದು ತಿಳಿದು ಬಂದಿದೆ.

ಸಹಕಾರಿಗಳು ಸ್ವೀಕರಿಸುವ ಠೇವುಗಳ ಗರಿಷ್ಠ ಅವಧಿ ಸರ್ವ ಸಾಮಾನ್ಯವಾಗಿ 3 ರಿಂದ 5 ವರ್ಷಗಳವರೆಗೆ ಇರುತ್ತದೆ. ಆದರೆ ಸಾಲ ವ್ಯವಹಾರಗಳನ್ನು ಬೆಳೆಸಲು ಸಹಕಾರಿಗಳು ಸ್ಥಿರಾಸ್ತಿ ಮೇಲೆ ಮಧ್ಯಮಾವಧಿ ಸಾಲಗಳನ್ನು ಹಾಗೂ ಗೃಹ ನಿರ್ಮಾಣ ಸಾಲಗಳನ್ನು ಕೊಡುತ್ತಿರುವುದು ಕಂಡು ಬರುತ್ತಿದೆ. ಇಂತಹ ಸಾಲಗಳ ಮರುಪಾವತಿ ಅವಧಿ ಕನಿಷ್ಠ 6 ರಿಂದ 10 ವರ್ಷಗಳಷ್ಟು ಆಗಿರುತ್ತದೆ. ಸಹಕಾರಿಗಳು ಸ್ವೀಕರಿಸುವ ಠೇವುಗಳ ಅವಧಿ ಮಂಜೂರು ಮಾಡಿದ ಸಾಲಗಳ ಮರುಪಾವತಿ ಅವಧಿಗಿಂತ ಕಡಿಮೆ ಇರುವಾಗ ಅದಕ್ಕಿಂತ ಹೆಚ್ಚಿನ ಮರುಪಾವತಿ ಅವಧಿಯ ಸಾಲಗಳನ್ನು ಮಂಜೂರು ಮಾಡುವುದು, ಠೇವುಗಳ ಸಕಾಲಿಕ ಮರುಪಾವತಿ ದೃಷ್ಟಿಯಿಂದ ಎಷ್ಟು ಮಟ್ಟಿಗೆ ಸೂಕ್ತ ಮತ್ತು ಯೋಗ್ಯ ಎಂಬುದನ್ನು ನಿರ್ದೇಶಕ ಮಂಡಳಿಗಳು ಚಿಂತನೆ ಮಾಡಬೇಕಾಗಿದೆ. ಆದ್ದರಿಂದ ಠೇವುಗಳ ಗರಿಷ್ಠ ಸ್ವೀಕರಣೆ ಅವಧಿ ತಿಳಿದುಕೊಂಡು ಆದಷ್ಟು ಮಟ್ಟಿಗೆ ಬಹಳಷ್ಟು ಸಾಲಗಳನ್ನು ಹೆಚ್ಚಿನ ಅವಧಿಗೆ ಮಂಜೂರು ಮಾಡುವುದು ಸರಿಯಲ್ಲ ಎಂಬ ವಿಷಯದ ಮೇಲೆ ನಿರ್ದೇಶಕ ಮಂಡಳಿಯು ಗಮನ ಹರಿಸುವುದು ಉತ್ತಮ

16ನೇ ಪುಟಕ್ಕೆ...



# ಸೌಹಾರ್ದ ಸಹಕಾರಿಗಳು
# ನಿಧಿಗಳ ಸಂಗ್ರಹಣೆ ಹಾಗೂ ಅವುಗಳ ವಿನಿಯೋಗ

ಎಸ್. ಜಿ. ಟೋಪಣ್ಣವರ
ವಿಭಾಗೀಯ ಅಧಿಕಾರಿ, ಬೆಳಗಾವಿ.

**ಸಹಕಾರಿಗಳು ಠೇವುಗಳ ಮೇಲೆ ಬಡ್ಡಿ ದರ ನಿಗದಿಪಡಿಸುವಾಗ ಸ್ಥಾನಿಕ ಬ್ಯಾಂಕುಗಳ ಬಡ್ಡಿ ದರಗಳನ್ನು ಹಾಗೂ ಸಹಕಾರಿ ಸಂಘ, ಸೌಹಾರ್ದ ಸಹಕಾರಿಗಳು ಠೇವುಗಳ ಮೇಲೆ ಕೊಡುವ ಬಡ್ಡಿ ದರಗಳನ್ನು ಗಣನೆಗೆ ತೆಗೆದುಕೊಳ್ಳಬೇಕು.**

ಸೌಹಾರ್ದ ಸಹಕಾರಿಗಳು ಪ್ರಾರಂಭದಲ್ಲಿ ಶೇರು ಬಂಡವಾಳವನ್ನು ಸಂಗ್ರಹಿಸಿ ಅಸ್ತಿತ್ವಕ್ಕೆ ಬರುವುದುಂಟು ಆದರೆ ಸೌಹಾರ್ದ ಸಹಕಾರಿಗಳಲ್ಲಿ ಪತ್ತಿನ (ಕ್ರೆಡಿಟ) ವ್ಯವಹಾರ ಮಾಡುವ ಸಹಕಾರಿಗಳು ಅವುಗಳು ಪ್ರತ್ಯೇಕವಾಗಿ ಸೌಹಾರ್ದ ಕ್ರೆಡಿಟ ಸಹಕಾರಿಗಳಾಗಿರಬಹುದು ಹಾಗೂ ವಿವಿಧೋದ್ದೇಶ ಸೌಹಾರ್ದ ಸಹಕಾರಿಗಳಾಗಿರಬಹುದು. ಇವುಗಳು ತಮ್ಮ ಶೇರು ಬಂಡವಾಳದ ಜೊತೆಗೆ ಪತ್ತಿನ ವ್ಯವಹಾರ ಮಾಡಲು ಸದಸ್ಯರಿಂದ ಠೇವುಗಳನ್ನು ಸಂಗ್ರಹಿಸುವ ಅಧಿಕಾರ ಹೊಂದಿರುತ್ತವೆ. ಅವಶ್ಯಕತೆ ಇದ್ದಾಗ ಬೇರೆ ಆರ್ಥಿಕ ಸಂಸ್ಥೆಗಳಿಂದ ತಮ್ಮ ವ್ಯವಹಾರಕ್ಕಾಗಿ ಸಾಲಗಳನ್ನು ಪಡೆಯುವ ಅಧಿಕಾರ ಹೊಂದಿರುತ್ತವೆ. ಈ ಸಂಸ್ಥೆಗಳು ಶೇರು ಬಂಡವಾಳ, ಠೇವುಗಳು ಅಲ್ಲದೇ ತಮ್ಮ ವ್ಯವಹಾರದಲ್ಲಿ ಪಡೆಯುವ ಲಾಭದಿಂದ ಕಾಯ್ದಿಟ್ಟ ನಿಧಿ ಹಾಗೂ ಇತರ ನಿಧಿಗಳನ್ನು ರಚಿಸುತ್ತವೆ. ಹೀಗೆ ಶೇರು ಬಂಡವಾಳ, ಠೇವುಗಳು, ಲಾಭದಿಂದ ರಚಿಸಲ್ಪಟ್ಟ ನಿಧಿಗಳು ಅಲ್ಲದೇ ಒಂದು ವೇಳೆ ಸಾಲ ಪಡೆದಲ್ಲಿ ಅಂತಹ ರಕ್ಕಮುಗಳು ಕೂಡಿಕೊಂಡು ಒಟ್ಟು ಸಂಸ್ಥೆಯ ನಿಧಿಗಳು (ಬಂಡವಾಳ) ಆಗುತ್ತವೆ. ಈ ಎಲ್ಲ ಹಣವನ್ನು ಎಷ್ಟರ ಮಟ್ಟಿಗೆ ಸಂಸ್ಥೆಯು ತನ್ನ ವ್ಯವಹಾರಕ್ಕೆ ವಿನಿಯೋಗಿಸಬಹುದು ಎಂಬುದು ಮಹತ್ವದ ವಿಷಯವಾಗಿದೆ. ಸಂಯುಕ್ತ ಸಹಕಾರಿಯ ಪರಿಪತ್ರದ ಪ್ರಕಾರ ಸಹಕಾರಿಯು ಬಂಡವಾಳದಲ್ಲಿಯ ಶೇರು ಬಂಡವಾಳ, ಕಾಯ್ದಿಟ್ಟ ನಿಧಿಗಳಷ್ಟು ಹಣ ಎಲ್ಲವನ್ನೂ ಪೂರ್ತಿಯಾಗಿ ಹಾಗೂ ಠೇವುಗಳ ಮೇಲೆ 80 ಪ್ರತಿಶತ ಹಣವನ್ನು ಮಾತ್ರ, ಸಾಲವನ್ನು ಪಡೆದಲ್ಲಿ ಅದರ ಪೂರ್ತಿ ರಕ್ಕಮವು ಹೀಗೆ ಆಗುವಷ್ಟು ಒಟ್ಟು ಹಣವನ್ನು ತನ್ನ ಸಾಲ ವ್ಯವಹಾರಕ್ಕೆ ಬಳಸುವ ಅಧಿಕಾರ ಹೊಂದಿರುತ್ತದೆ.



ಸಹಕಾರಿಯು ಪಡೆದ ಒಟ್ಟು ಠೇವುಗಳಲ್ಲಿ 20 ಪ್ರತಿಶತದಷ್ಟು ಹಣವನ್ನು ದ್ರವ್ಯಾಸ್ಥಿ ರೂಪದಲ್ಲಿ ಹೊಂದಬೇಕಾಗುತ್ತದೆ. ಈ ಹಣವನ್ನು ಕೈಶಿಲ್ಕು ಅಲ್ಲದೇ ಕಾನೂನು ಕಲಂ 18 ರ ಪ್ರಕಾರ ಸಹಕಾರಿ ಬ್ಯಾಂಕು, ಕಮರ್ಶಿಯಲ್ ಬ್ಯಾಂಕುಗಳಲ್ಲಿ ಉಳಿತಾಯ ಖಾತೆ, ಚಾಲ್ತಿ ಖಾತೆ ಹಾಗೂ ಮುದ್ದತ್ತಿ ಠೇವು ಖಾತೆಗಳಲ್ಲಿ, ಸರ್ಕಾರಿ ಹಾಗೂ ಟ್ರಸ್ಟಿ ಭದ್ರತೆಗಳಲ್ಲಿ ಇಡಬೇಕಾಗುತ್ತದೆ. ಕೈಶಿಲ್ಕು, ಉಳಿತಾಯ ಖಾತೆ ಹಾಗೂ ಚಾಲ್ತಿ ಖಾತೆಗಳಲ್ಲಿದ್ದ ಇರುವ ರಕಮು ಒಟ್ಟು ಠೇವುಗಳ 5 ಪ್ರತಿಶತಕ್ಕೆ ಕಡಿಮೆಯಾಗದಂತೆ ಕಾಳಜಿ ವಹಿಸಬೇಕು. ಹೆಚ್ಚಿನ ಪ್ರಮಾಣದಲ್ಲಿ ಹಣವನ್ನು ಚಾಲ್ತಿ ಖಾತೆ ಮತ್ತು ಕೈಶಿಲ್ಕುದಲ್ಲಿ ಇರಿಸಿದರೆ ಅದರಿಂದ ಯಾವುದೇ ಲಾಭ ಇರುವುದಿಲ್ಲ. ಆದ್ದರಿಂದ ಚಾಲ್ತಿ ಖಾತೆ ಮತ್ತು ಕೈಶಿಲ್ಕುದಲ್ಲಿ ಹೆಚ್ಚಿಗೆ ಹಣ ಇರದಂತೆ ಗಮನ ಹರಿಸಬೇಕು.

ಸಹಕಾರಿಗಳು ಎಷ್ಟು ರಕ್ಕಮುಗಳ ವರೆಗೆ ಠೇವು ರೂಪದಲ್ಲಿ ಹಣವನ್ನು ಸದಸ್ಯರಿಂದ ಪಡೆಯುವ ಬಗ್ಗೆ ಸೌಹಾರ್ದ ಕಾನೂನಿನಲ್ಲಿ ಯಾವುದೇ ಸೂಚನೆಗಳು, ನಿಯಮಗಳು ಇರುವುದಿಲ್ಲ. ಆದರೆ ಸಹಕಾರಿ ಸಂಸ್ಥೆಗಳ ಹಳೆ ಕಾಯ್ದೆ ಅಂದರೆ ಕರ್ನಾಟಕ ಸಹಕಾರಿ ಸಂಘಗಳ ಕಾಯ್ದೆ 1959 ರ ಪ್ರಕಾರ ಯಾವುದೇ ಸಹಕಾರಿ ಸಂಘವು (ಹಳೆಯ ಕಾಯ್ದೆಯಲ್ಲಿ ಕೆಲಸ ಮಾಡುವ ಸಹಕಾರಿ ಪತ್ತಿನ ಸಂಘ ಮಾತ್ರ) ತಾನು ದೈನಂದಿಕ ವ್ಯವಹಾರದಲ್ಲಿ ಸರ್ವಸಾಮಾನ್ಯವಾಗಿ ತಾನು ಹೊಂದಿದ ವಸೂಲಾದ ಶೇರು ಬಂಡವಾಳ, ಕಾಯ್ದಿಟ್ಟ ನಿಧಿ ರಕ್ಕಮು ಹಾಗೂ ಇಮಾರತಿ ನಿಧಿ ಹೀಗೆ ಆಗುವ ಒಟ್ಟು ರಕ್ಕಮುಗಳಲ್ಲಿ ಸಂಸ್ಥೆಯು ಏನಾದರೂ ನಷ್ಟ ಅನುಭವಿಸಿದ್ದರೆ ಅದನ್ನು ವಜಾ ಮಾಡಿ ಆಗುವಷ್ಟು ಹಣದ ಮೂವತ್ತು ಪಟ್ಟು ಹಣವನ್ನು ಠೇವು ರೂಪದಲ್ಲಿ ಸದಸ್ಯರಿಂದ ಸಂಗ್ರಹಿಸಬಹುದಾಗಿದೆ. ಈ ನಿಯಮ ಹಳೆ ಕಾಯ್ದೆಯಲ್ಲಿ ಪ್ರಚಲಿತವಿದ್ದು ಹೊಸ ಸೌಹಾರ್ದ ಕಾಯ್ದೆಯಲ್ಲಿ ಕಾರ್ಯ ನಿರ್ವಹಿಸುತ್ತಿರುವ ಸೌಹಾರ್ದ ಸಹಕಾರಿಗಳಿಗೆ ಅನ್ವಯಿಸುವುದಿಲ್ಲ. ಆದರೂ ಸಂಸ್ಥೆಯ ಹಿತದೃಷ್ಟಿಯಿಂದ ಸ್ವಂತ ಬಂಡವಾಳಕ್ಕೆ ಠೇವುಗಳ ಸ್ವೀಕರಣೆ ಒಂದು ಅನುಪಾತ ಇಡುವುದರೊಂದಿಗೆ ಠೇವುದಾರರ ಹಿತದೃಷ್ಟಿಯಿಂದ ಸದರಿ ಮೇಲಿನ ನಿಯಮವನ್ನು ಸೌಹಾರ್ದ ಸಹಕಾರಿಗಳು ಠೇವು ಸಂಗ್ರಹಣೆ ವಿಷಯದಲ್ಲಿ ಅನುಸರಿಸಿದರೆ ಯಾವುದೇ ತಪ್ಪಾಗುವುದಿಲ್ಲ. ಒಂದು ವೇಳೆ ಈ ನಿಯಮಗಳನ್ನು ಸೌಹಾರ್ದ ಸಹಕಾರಿಗಳು ಅನುಸರಿಸಿದರೆ ಸಂಸ್ಥೆಯ ಶೇರು ಬಂಡವಾಳ ಹಾಗೂ ಕಾಯ್ದಿಟ್ಟ ಹಾಗೂ ಇತರ ನಿಧಿಗಳು ಠೇವುಗಳ ಜೊತೆಗೆ ನಿಗದಿತ ಅನುಪಾತದಲ್ಲಿ ಬೆಳೆಯಲು ಅನುಕೂಲವಾಗುತ್ತದೆ. ಹೀಗೆ ಮಾಡಿದಲ್ಲಿ ಸಹಕಾರಿಯ ಹಣಕಾಸಿನ ಅಡಿಗಲ್ಲು ಭದ್ರವಾಗುತ್ತ ಹೋಗುತ್ತದೆ.

ಹಳೆ ಕಾಯ್ದೆಯಿಂದ ಹೊಸ ಕಾಯ್ದೆಗೆ ಪರಿವರ್ತನೆಗೊಂಡ ಬಹಳಷ್ಟು ಸಹಕಾರಿಗಳು ಹಣಕಾಸಿನ ವ್ಯವಹಾರದಲ್ಲಿ ಬಹುಮಟ್ಟಿಗೆ ಪರಿಣಿತರಿದ್ದು ಅವೆಲ್ಲ ಉತ್ತಮವಾಗಿ ಬೆಳವಣಿಗೆ ಹೊಂದುತ್ತಿರುತ್ತವೆ. ಆದರೆ ಸೌಹಾರ್ದ ಸಹಕಾರಿ ಕಾಯ್ದೆಯಲ್ಲಿ ನೋಂದಣಿಗೊಂಡ ಬಹಳಷ್ಟು ಹೊಸ ಸಹಕಾರಿಗಳು ಹಣಕಾಸಿನ ವ್ಯವಹಾರದಲ್ಲಿ, ನಿಧಿಗಳ ವಿನಿಯೋಗದ ವಿಷಯದಲ್ಲಿ ಅನೇಕ ವಿಷಯಗಳನ್ನು ಶಾಸ್ತ್ರೋಕ್ತವಾಗಿ ಹಾಗೂ ಆಳವಾಗಿ ತಿಳಿದುಕೊಳ್ಳಬೇಕಾಗಿದೆ. ಏಕೆಂದರೆ ಇತ್ತಿತ್ತಲಾಗಿ ಈ ಹೊಸ ಸಂಸ್ಥೆಗಳ ಲೆಕ್ಕಪರಿಶೋಧನಾ ವರದಿಗಳನ್ನು ಪರಿಶೀಲಿಸಿದಾಗ ಈ ಸಂಸ್ಥೆಗಳು ಹಣ ವಿನಿಯೋಗದ ಬಗ್ಗೆ ಸರಿಯಾಗಿ ತಿಳಿದುಕೊಳ್ಳದೇ ಕೆಲಸ ಮಾಡುತ್ತಿರುವುದು ಕಂಡು ಬಂದಿದೆ.

ಸಹಕಾರಿಯು ಪಡೆದ ಒಟ್ಟು ಠೇವುಗಳಲ್ಲಿ 20 ಪ್ರತಿಶತದಷ್ಟು ಹಣವನ್ನು ದ್ರವ್ಯಾಸ್ಥಿ ರೂಪದಲ್ಲಿ ಹೊಂದಬೇಕಾಗುತ್ತದೆ. ಈ ಹಣವನ್ನು ಕೈಶಿಲ್ಕು ಅಲ್ಲದೇ ಕಾನೂನು ಕಲಂ 18 ರ ಪ್ರಕಾರ ಸಹಕಾರಿ ಬ್ಯಾಂಕು, ಕಮರ್ಶಿಯಲ್ ಬ್ಯಾಂಕುಗಳಲ್ಲಿ ಉಳಿತಾಯ ಖಾತೆ, ಚಾಲ್ತಿ ಖಾತೆ ಹಾಗೂ ಮುದ್ದತ್ತಿ ಠೇವು ಖಾತೆಗಳಲ್ಲಿ, ಸರ್ಕಾರಿ ಹಾಗೂ ಟ್ರಸ್ಟಿ ಭದ್ರತೆಗಳಲ್ಲಿ ಇಡಬೇಕಾಗುತ್ತದೆ. ಕೈಶಿಲ್ಕು, ಉಳಿತಾಯ ಖಾತೆ ಹಾಗೂ ಚಾಲ್ತಿ ಖಾತೆಗಳಲ್ಲಿದ್ದ ಇರುವ ರಕ್ಕಮು ಒಟ್ಟು ಠೇವುಗಳ 5 ಪ್ರತಿಶತಕ್ಕೆ ಕಡಿಮೆಯಾಗದಂತೆ ಕಾಳಜಿ ವಹಿಸಬೇಕು. ಹೆಚ್ಚಿನ ಪ್ರಮಾಣದಲ್ಲಿ ಹಣವನ್ನು ಚಾಲ್ತಿ ಖಾತೆ ಮತ್ತು ಕೈಶಿಲ್ಕುದಲ್ಲಿ ಇರಿಸಿದರೆ ಅದರಿಂದ ಯಾವುದೇ ಲಾಭ ಇರುವುದಿಲ್ಲ. ಆದ್ದರಿಂದ ಚಾಲ್ತಿ ಖಾತೆ ಮತ್ತು ಕೈಶಿಲ್ಕುದಲ್ಲಿ ಹೆಚ್ಚಿಗೆ ಹಣ ಇರದಂತೆ ಗಮನ ಹರಿಸಬೇಕು. ಆದರೆ ಉಳಿತಾಯ ಖಾತೆಯಲ್ಲಿ ಜಮೆ ಇದ್ದರೆ ಅದರ ಮೇಲೆ ಬಡ್ಡಿ ದೊರೆಯುವುದರಿಂದ ಕೆಲ ಮಟ್ಟಿಗೆ ಹಣವನ್ನು ಅಲ್ಲಿ ಜಮೆ ಇಡಬಹುದಾಗಿದೆ. ಉಳಿದ 15 ಪ್ರತಿಶತ ಹಣವನ್ನು ಸದರಿ ಬ್ಯಾಂಕುಗಳಲ್ಲಿ ಹೆಚ್ಚು ಬಡ್ಡಿ ದರದ ಮುದ್ದತ್ತು ಠೇವುಗಳಲ್ಲಿ ಲಾಭದಾಯಕವಾಗಿ ಹೂಡಿಕೆ ಮಾಡಬೇಕು. ಆದರೆ ಅನೇಕ ಸಹಕಾರಿಗಳು ದ್ರವ್ಯಾಸ್ಥಿ ಹಣವನ್ನು ಕಾನೂನು ವ್ಯತಿರಿಕ್ತವಾಗಿ ಇತರ ಸೌಹಾರ್ದ ಸಹಕಾರಿ ಸಂಘಗಳಲ್ಲಿ, ಸಕ್ಕರೆ ಕಾರ್ಖಾನೆಗಳಲ್ಲಿ ಠೇವು ರೂಪದಲ್ಲಿ ಅಲ್ಲದೇ ಸಕ್ಕರೆ ಕಾರ್ಖಾನೆಗಳ ಶೇರುಗಳು, ಬೇರೆ ಬೇರೆ ಮ್ಯೂಚುಅಲ್ ಫಂಡಗಳಲ್ಲಿ ಹಣ ಹೂಡಿಕೆ

# ಬೆಳಗಾವಿಯಲ್ಲಿ ವ್ಯಕ್ತಿತ್ವ ವಿಕಸನ ಹಾಗೂ ಅಧೀಪ್ರೇರಣಾ ತರಬೇತಿ




ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ, ಕರ್ನಾಟಕ ರಾಜ್ಯ ಕ್ರೆಡಿಟ್ ಸೊಸೈಟೀಸ್ ಅಸೋಸಿಯೇಶನ್ ಹಾಗೂ ಸ್ಯಾಪ–ಕೆ ಇವರುಗಳ ಸಂಯುಕ್ತ ಆಶ್ರಯದಲ್ಲಿ ದಿನಾಂಕ 28–5–2011 ರಂದು ಬೆಳಗಾವಿಯ ಕನ್ನಡ ಸಾಹಿತ್ಯ ಭವನದಲ್ಲಿ ಬೆಳಗಾವಿ ನಗರ ಹಾಗೂ ಬೆಳಗಾವಿ ಗ್ರಾಮಾಂತರ ತಾಲ್ಲೂಕುಗಳ ಸೌಹಾರ್ದ ಸಹಕಾರಿಗಳ ಹಗೂ ಪತ್ತಿನ ಸಹಕಾರಿ ಸಂಘಗಳ ಅಧ್ಯಕ್ಷರು ಹಾಗೂ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳಿಗಾಗಿ "ವ್ಯಕ್ತಿತ್ವ ವಿಕಸನ ಹಾಗೂ ಅಧೀಪ್ರೇರಣಾ ತರಬೇತಿ" ಒಂದು ದಿನದ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿತ್ತು.

ಕಾರ್ಯಕ್ರಮವನ್ನು ಸಂಯುಕ್ತ ಸಹಕಾರಿಯ ಬೆಳಗಾವಿ ನಿರ್ದೇಶಕ ಹಾಗೂ ಬೋರಗಾವನ ಅರಿಹಂತ ಪತ್ತಿನ ಸೌಹಾರ್ದ ಸಹಕಾರಿಯ ಅಧ್ಯಕ್ಷ ಶ್ರೀ ರಾವಸಾಹೇಬ ಪಾಟೀಲರವರು ದೀಪ ಬೆಳಗಿಸಿ ಕಾರ್ಯಕ್ರಮ ಉದ್ಘಾಟಿಸಿ ಕಾರ್ಯಕ್ರಮಕ್ಕೆ ಚಾಲನೆ ನೀಡಿ ಶುಭಕೋರಿದರು.

ಕಾರ್ಯಕ್ರಮದಲ್ಲಿ ಸಂಯುಕ್ತ ಸಹಕಾರಿಯ ಉಪಾಧ್ಯಕ್ಷ ಶ್ರೀ ಗುರುನಾಥ ಜ್ಯಾಂತಿಕರರವರು ಪ್ರಾಸ್ತಾವಿಕ ಮಾತನಾಡಿ ಸಹಕಾರಿ ಕ್ಷೇತ್ರಕ್ಕೆ 100 ವರ್ಷಗಳ ಇತಿಹಾಸವಿದ್ದರೂ ಸಹಿತ ಸಹಕಾರಿ ಕ್ಷೇತ್ರ ನಿರೀಕ್ಷಿಸಿದ ಸಾಧನೆಯನ್ನು ಸಾಧಿಸಲಿಲ್ಲ. ಹೀಗಾಗಿ ಸೌಹಾರ್ದ ಸಹಕಾರಿ ಕಾಯ್ದೆ ಅಸ್ತಿತ್ವಕ್ಕೆ ಬರಬೇಕಾಯಿತು. ಸೌಹಾರ್ದ ಸಹಕಾರಿ ಕ್ಷೇತ್ರ ಅಸ್ತಿತ್ವಕ್ಕೆ ಬಂದ ಕೇವಲ 10 ವರ್ಷಗಳಲ್ಲಿ ಸಾರ್ವಜನಿಕರ ಹಾಗೂ ಸರಕಾರದ ಗಮನ ಸೆಳೆದಿದೆ. ಉತ್ತಮ ಸಾಧನೆಗೆ ಅವಕಾಶವಾಗಿದೆ. ಈ ರೀತಿಯ ಉತ್ತಮ ಸಾಧನೆಗಳು ಹಳೆಯ ಕಾಯ್ದೆಯಡಿ ಕಾರ್ಯನಿರ್ವಹಿಸುತ್ತಿರುವ ಸಹಕಾರಿ ಸಂಘಗಳಲ್ಲೂ ಆಗಬೇಕು. ಅವರುಗಳ ವ್ಯಕ್ತಿತ್ವ ವಿಕಸನಕ್ಕೆ ಪೂರಕವಾದ ಕೆಲಸವಾಗಬೇಕಿದೆ ಅವರನ್ನು ಸೌಹಾರ್ದ ಸಹಕಾರಿ ಕ್ಷೇತ್ರ–ಕ್ಕೆ ಬರಮಾಡಿಕೊಳ್ಳಬೇಕಾಗಿದೆ ಅದಕ್ಕಾಗಿಯೆ ಈ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದೆ. ಎಂದು ತಿಳಿಸಿದರು.

ಕಾರ್ಯಕ್ರಮ ಅಧ್ಯಕ್ಷತೆ ವಹಿಸಿ ಮಾತನಾಡಿದ ಸಂಯುಕ್ತ ಸಹಕಾರಿಯ ಅಧ್ಯಕ್ಷ ಶ್ರೀ ಎಸ್. ಆರ್.ಸತೀಶಚಂದ್ರವರು ಸೌಹಾರ್ದ ಸಹಕಾರಿ ಕ್ಷೇತ್ರ ದಶಮಾನೋತ್ಸವ ಆಚರಿಸುತ್ತಿರುವ ಈ ಸಂದರ್ಭದಲ್ಲಿ, ಸೌಹಾರ್ದ ಸಹಕಾರಿಗಳ ಕಾರ್ಯನಿರ್ವಹಣೆಯನ್ನು ಇನ್ನೂ ಹೆಚ್ಚು ಚುರುಕು ಗೊಳಿಸಿ ಅವರ ವ್ಯಕ್ತಿತ್ವ ವಿಕಸನಕ್ಕೆ ಅಗತ್ಯವಾಗುವ ವಿಷಯಗಳ ಬಗ್ಗೆ ತರಬೇತಿ ನೀಡಿ ಅವರ ಕಾರ್ಯದಕ್ಷತೆಯನ್ನು ಹೆಚ್ಚಿಸುವುದರ ಜೋತೆಗೆ ಹಳೆಯ ಕಾಯ್ದೆಯ ಸ್ನೇಹಿತರಿಗೆ ಸೌಹಾರ್ದ ಸಹಕಾರಿ ಕಾಯ್ದೆಯ ಹಾಗೂ ಸೌಹಾರ್ದ ಸಹಕಾರಿ ಕಾರ್ಯಚಟುವಟಿಕೆಗಳ ಬಗ್ಗೆ ಮಾಹಿತಿ ನೀಡಿ ಅವರನ್ನೂ ಸೌಹಾರ್ದ ಸಹಕಾರಿ ಕ್ಷೇತ್ರಕ್ಕೆ ಬರಮಾಡಿಕೊಳ್ಳುವುದು ಈ ಕಾರ್ಯ ಕ್ರಮದ ಮುಖ್ಯ ಉದ್ದೇಶವಾಗಿದೆ. ಈ ವರ್ಷದ ಕೊನೆಯಲ್ಲಿ ಸೌಹಾರ್ದ ಸಹಕಾರಿಗಳ ಸಂಖ್ಯೆ 2000ಕ್ಕೆ ಕೊಂಡೊಯ್ಯುವುಕ್ಕೆ ಎಲ್ಲ ಸಹಕಾರಿಗಳು ಪ್ರಯತ್ನಿಸಬೇಕು ಎಂದು ತಿಳಿಸಿದರು.

ಸಹಕಾರ ಸಂಘಗಳ ನಿವೃತ್ತ ಅಪರ ನಿಬಂಧಕ ಶ್ರೀ ಸಿ.ಎನ್.ಪರಶಿವಮೂರ್ತಿಯವರು ಸೌಹಾರ್ದ ಸಹಕಾರಿ ಕಾಯ್ದೆಯ ಹಾಗೂ 1959 ರ ಸಹಕಾರಿ ಕಾಯ್ದೆಯ ವ್ಯತ್ಯಾಸಗಳನ್ನು, ಸೌಹಾರ್ದ ಸಹಕಾರಿ ಕಾಯ್ದೆಯ ಆಶಯವನ್ನು ಮತ್ತು ಆಡಳಿತ ಮಂಡಳಿಯವರ ಕರ್ತವ್ಯ ಹಾಗೂ ಜವಾಬ್ದಾರಿಗಳ ಬಗ್ಗೆ ಮತ್ತು ಬೆಳಗಾವಿ ಸಹಕಾರ ತರಬೇತಿ ಕೇಂದ್ರದ ಉಪನ್ಯಾಸಕಿ ಶ್ರೀಮತಿ ವಸಂತ ಗೀತಾ ಹಿರೇಮಠ ರವರು ವ್ಯಕ್ತಿತ್ವ ವಿಕಸನ ದ ವಿಷಯಗಳ ಬಗ್ಗೆ ಉಪನ್ಯಾಸ ನೀಡಿದರು.

ಸಹಕಾರಿ ಸಂಸ್ಥೆಗಳಲ್ಲಿ ಬಡ್ಡಿಯೇತರ ಆದಾಯಗಳನ್ನು ಹೆಚ್ಚಿಸಿಕೊಳ್ಳಲು ಸಾಧ್ಯವಾಗುವಂತೆ ಇಫ್ಕೋ ಟೋಕಿಯೊ, ವೆಸ್ಟರ್ನ ಮನಿ ಟ್ರಾನ್ಸಫರ ಹಾಗೂ ಸುವಿಧ ಕಂಪನಿಗಳ ಅಧಿಕಾರಿಗಳು ವಿವರಗಳನ್ನು ನೀಡಿದರು.

ಹಳೆಯ ಕಾಯ್ದೆಯ 39 ಸಹಕಾರಿ ಸಂಘಗಳ ಹಾಗೂ ಸೌಹಾರ್ದ ಸಹಕಾರಿ ಕಾಯ್ದೆಯ 42 ಸಹಕಾರಿಗಳ 110 ಪ್ರತಿನಿಧಿಗಳು ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು.

## ಹತ್ತು ದಿನಗಳ ವಿಶೇಷ ವ್ಯಕ್ತಿತ್ವ ವಿಕಸನ ತರಬೇತಿ ಕಾರ್ಯಕ್ರಮ

ರಾಜ್ಯದ ಸೌಹಾರ್ದ ಸಹಕಾರಿಗಳ ಅಧಿಕಾರಿ ಸಿಬ್ಬಂದಿಯವರಿಗಾಗಿ ದಿನಾಂಕ 20–6–2011 ರಿಂದ 29–6–2011 ರವರೆಗೆ ಸಂಪೂರ್ಣ ವ್ಯಕ್ತಿತ್ವ ವಿಕಸನ ವಿಶೇಷ ತರಬೇತಿ ಕಾರ್ಯಕ್ರಮವನ್ನು ಜಿಲ್ಲಾ ತರಬೇತಿ ಕೇಂದ್ರ ಗಾಂಧಿನಗರ ಧಾರವಾಡದಲ್ಲಿ ಹಮ್ಮಿಕೊಳ್ಳಲಾಗಿದೆ. ಕೇವಲ 40 ಜನರಿಗೆ ಮಾತ್ರ ಪ್ರವೇಶ ಅವಕಾಶ . ರೂ 5000/– ತರಬೇತಿ ಶುಲ್ಕ. ಮಹಿಳಾ ಅಭ್ಯರ್ಥಿಗಳಿಗೆ ಪ್ರತ್ಯೇಕ ವಸತಿ ವ್ಯವಸ್ಥೆ. ಉತ್ತಮ ವಿಷಯಗಳು. ಅನುಭವಿ ಉಪನ್ಯಾಸಕರಿಂದ ತರಬೇತಿ. ಯೋಗ ,ಆಹಾರ, ಆರೋಗ್ಯ ಮನರಂಜನೆ ಮತ್ತು ಅಧ್ಯಾತ್ಮ ವಿಷಯಗಳ ವಿಶೇಷ ಉಪನ್ಯಾಸಗಳು ಉತ್ತಮ ಸೌಹಾರ್ದ ಸಹಕಾರಿ ಸಂಸ್ಥೆಗಳಿಗೆ ಮತ್ತು ಪ್ರೇಕ್ಷಣೀಯ ಸ್ಥಳಗಳಿಗೆ ಅಧ್ಯಯನ ಪ್ರವಾಸ ಭಾಗವಹಿಸಲು ಆಸಕ್ತಿಯಿರುವ ಸೌಹಾರ್ದ ಸಹಕಾರಿಗಳು ಸಂಯುಕ್ತ ಸಹಕಾರಿಯನ್ನು ಸಂಪರ್ಕಿಸಲು ಕೋರಿದೆ.



## ಪತ್ರಿಕಾಗೋಷ್ಠಿ

ಸಂಯುಕ್ತ ಸಹಕಾರಿಯ ಅಧ್ಯಕ್ಷ ಶ್ರೀ ಎಸ್.ಆರ್.ಸತೀಶಚಂದ್ರರವರು ದಿನಾಂಕ 28–05–2011 ರಂದು ಬೆಳಗಾವಿಯ ಕನ್ನಡ ಸಾಹಿತ್ಯ ಭವನದಲ್ಲಿ ಸೌಹಾರ್ದ ಸಹಕಾರಿ ಕ್ಷೇತ್ರದ ಅಭಿವೃದ್ಧಿಯ ಕುರಿತಂತೆ ಪತ್ರಿಕಾಗೋಷ್ಠಿಯನ್ನು ನಡೆಸಿದರು. ಈ ಸಂದರ್ಭದಲ್ಲಿ ಸಂಯುಕ್ತ ಸಹಕಾರಿಯ ಉಪಾಧ್ಯಕ್ಷ ಶ್ರೀ ಗುರುನಾಥ ಜ್ಯಾಂತಿಕರ ನಿರ್ದೇಶಕ ಶ್ರೀ ರಾಸಾಹೇಬ್ ಪಾಟೀಲ ಮತ್ತು ಹಿರಿಯ ಸಹಕಾರಿ ಶ್ರೀ ಬಿ.ಎಸ್.ಸುಲ್ತಾನಪುರಿಯವರು ಉಪಸ್ಥಿತರಿದ್ದರು.





**ಬೆಳಗಾವಿ ವಿಭಾಗದ ನಿರ್ದೇಶಕರುಗಳ ಸಭೆ :** ಸಂಯುಕ್ತ ಸಹಕಾರಿಯ ಬೆಳಗಾವಿ ವಿಭಾಗದ ನಿರ್ದೇಶಕರುಗಳ ಸಭೆ ದಿನಾಂಕ 27–5–2011 ರಂದು ಬೆಳಗಾವಿಯ ವಿಭಾಗೀಯ ಕಚೇರಿಯಲ್ಲಿ ಸಂಯುಕ್ತ ಸಹಕಾರಿಯ ಅಧ್ಯಕ್ಷ ಶ್ರೀ ಎಸ್.ಆರ್.ಸತೀಶಚಂದ್ರರವರ ಅಧ್ಯಕ್ಷತೆಯಲ್ಲಿ ನಡೆಯಿತು. ಉಪಾಧ್ಯಕ್ಷ ಶ್ರೀ ಗುರುನಾಥ ಜ್ಯಾಂತಿಕರ ವಿಭಾಗೀಯ ನಿರ್ದೇಶಕರುಗಳಾದ ಶ್ರೀ ರಾವಸಾಹೇಬ್ ಪಾಟೀಲ್, ಶ್ರೀ ಎಮ್.ಬಿ.ಕಲಾಲ, ಶ್ರೀ ಆರ್.ಎನ್.ದೇಶಪಾಂಡೆ, ಶ್ರೀ ಭಾಸ್ಕರ ಹೆಗಡೆ ಕಾಗೇರಿ, ಶ್ರೀ ಅರುಣ ಶಾಮರ (ಎಮ್.ಎಲ್.ಸಿ) ಹಾಗೂ ಶ್ರೀ ರವಿ ಎಲೆಗಾರರವರು ಮತ್ತು ವ್ಯವಸ್ಥಾಪಕ ನಿರ್ದೇಶಕರಾದ ಶ್ರೀ ಶರಣಗೌಡ .ಜಿ.ಪಾಟೀಲ್ ಭಾಗವಹಿಸಿದ್ದರು. ಬೆಳಗಾವಿ ವಿಭಾಗದ ಸೌಹಾರ್ದ ಸಹಕಾರಿಗಳ ಕಾರ್ಯ ಚಟುವಟಿಕೆಗಳು ಮತ್ತು ಸಂಯುಕ್ತ ಸಹಕಾರಿಯ ಕಾರ್ಯಕ್ರಮಗಳ ಹಾಗೂ ಸೌಹಾರ್ದ ಸಹಕಾರಿಗಳ ಗುಣಮಟ್ಟ ನಿರ್ವಹಣೆಗೆ ಸಂಬಂದಿಸಿದಂತೆ  ಬಗ್ಗೆ ಚರ್ಚಿಸಲಾಯಿತು. ಕಾರ್ಯಯೋಜನೆ ಸಿದ್ಧಪಡಿಸಿ ಅನುಷ್ಠಾನಗೊಳಿಸಲು ತೀರ್ಮಾನಿಸಲಾಯಿತು.

# ಸರಸ್ವತಿ ಕ್ರೆಡಿಟ್ ಸಹಕಾರಿಯಲ್ಲಿ ಚಿನ್ನದ ನಾಣ್ಯಗಳ ಮಾರಟದ ಯಶಸ್ವಿ ಪ್ರಯೋಗ

ಪುತ್ತೂರಿನ ದರ್ಬೆಯಲ್ಲಿ ಕೇಂದ್ರ ಕಛೇರಿ ಹೊಂದಿರುವ ಶ್ರೀ ಸರಸ್ವತಿ ಕ್ರೆಡಿಟ್ ಸೌಹಾರ್ದ ಸಹಕಾರಿಯಲ್ಲಿ ತನ್ನ ಗ್ರಾಹಕರಿಗೆ ಚಿನ್ನದ ನಾಣ್ಯಗಳನ್ನು ಮಾರಾಟ ಮಾಡುವ ಮೂಲಕ ಅಕ್ಷಯ ತದಿಗೆಯನ್ನು ವಿಶಿಷ್ಟ ರೀತಿಯಲ್ಲಿ ಆಚರಿಸಿತು. ರಾಜ್ಯದ ಸೌಹಾರ್ದ ಸಹಕರಿಗಳ ಪೈಕಿ ಪ್ರಥಮ ಪ್ರಯೋಗ ಇದಾಗಿದ್ದು, ಪುತ್ತೂರಿನ ಶ್ಯಾಮ್ ಜ್ಯುವೆಲ್ಸ್ ಪ್ರೈ.ಲಿ.ನ ಸಹಯೋಗದೊಂದಿಗೆ ಸಹಕಾರಿಯು ತನ್ನ ಎಲ್ಲಾ ಶಾಖೆಗಳಲ್ಲಿ ಸಾರ್ವಜನಿಕರಿಗೆ ಅಕ್ಷಯ ತೃತೀಯದಂದು ಚಿನ್ನದ ನಾಣ್ಯಗಳ ಮಾರಾಟ ಸೇವೆಯನ್ನು ಕೊಡುಗೆಯಾಗಿ ನೀಡಿತು.

ಸುಮಾರು 500 ಗ್ರಾಂನಷ್ಟು ಚಿನ್ನದ ನಾಣ್ಯಗಳ ಮಾರಾಟದ ನಿರೀಕ್ಷೆಯನ್ನಿಟ್ಟುಕೊಂಡಿದ್ದ ಸಹಕಾರಿಯು, ಗ್ರಾಹಕರು ನೀಡಿದ ಪ್ರೋತ್ಸಾಹದಿಂದಾಗಿ ಒಂದು ಕಿ.ಗ್ರಾಂ.ಗಿಂತಲೂ ಹೆಚ್ಚು ನಾಣ್ಯಗಳನ್ನು ಮಾರಾಟ ಮಾಡಲು ಯಶಸ್ವಿಯಾಯಿತು. ಸುಮಾರು 150ಕ್ಕೂ ಹೆಚ್ಚು ಗ್ರಾಹಕರು ಚಿನ್ನದ ನಾಣ್ಯವನ್ನು ಖರೀದಿಸಿದರು.

ಅಕ್ಷಯ ತೃತೀಯಾದ ಈ ಶುಭ ಸಂದರ್ಭವನ್ನು ಸದುಪಯೋಗಪಡಿಸಿಕೊಂಡಿದ್ದು, ಸಹಕಾರಿಯು ಸುಮಾರು ರೂ.20000/–ದಷ್ಟು ಕಮಿಷನ್ ಪಡೆಯಲು ಸಾಧ್ಯವಾಯಿತು.

ಚಿನ್ನದ ಮೌಲ್ಯವು ಕಾಲತೀತ ಹಾಗೂ ಸೀಮಿತವಾದದ್ದು, ಅಲ್ಪಾವಧಿಯಲ್ಲಿ ಚಿನ್ನದ ಬೆಲೆಗಳಲ್ಲಿ ಏರುಪೇರುಗಳಾದರೂ ದೀರ್ಘಾವಧಿಯಲ್ಲಿ ಚಿನ್ನದ




ಬೆಲೆಯು ಏರುಗತಿಯಲ್ಲಿಯೇ ಸಾಗುತ್ತಿದೆ. ಹಾಗೆಯೇ ಒಂದು ಪ್ರದೇಶದಿಂದ ಇನ್ನೊಂದು ಪ್ರದೇಶಗಳಿಗೆ ಹೋದರೂ ಕೂಡಾ ಚಿನ್ನ ತನ್ನ ಮೌಲ್ಯವನ್ನು ಕಳೆದುಕೊಳ್ಳುವುದಿಲ್ಲ. ಆದುದರಿಂದ ಚಿನ್ನ ಖರೀದಿಗೆ ತೊಡಗಿಸಿದ ಬಂಡವಾಳವು ಗ್ರಾಹಕರಿಗೆ ಭವಿಷ್ಯದಲ್ಲಿ ಲಾಭದಾಯಕವಾಗಬಲ್ಲದು.

ಸಹಕಾರಿಯು ಪ್ರಾಯೋಗಿಕವಾಗಿ ತನ್ನ ಸದಸ್ಯರಿಗೆ ಹಾಗೂ ಗ್ರಾಹಕರಿಗೆ ವಿಶಿಷ್ಟ ಸೇವೆಗಳನ್ನು ಒದಗಿಸುತ್ತಿದ್ದು ಗ್ರಾಹಕರ ಪ್ರೋತ್ಸಾಹವನ್ನು ಗಮನಿಸಿ ಇಂತಹ ಸೌಲಭ್ಯಗಳನ್ನು ಪ್ರತಿನಿತ್ಯ ಗ್ರಾಹಕರಿಗೆ ಲಭ್ಯವಾಗಿಸುವ ನಿರೀಕ್ಷೆಯನ್ನಿಟ್ಟುಕೊಂಡಿದೆ.

ಪ್ರಸಕ್ತ ಸ್ಪರ್ಧಾತ್ಮಕ ಯುಗದಲ್ಲಿ ವಿವಿಧ ಅಭಿರುಚಿಯ ಗ್ರಾಹಕನು ಆರ್ಥಿಕ ಮಾರುಕಟ್ಟೆಯ ನಿರ್ಣಾಯಕ ಪಾತ್ರಧಾರನಾಗಿರುತ್ತಾನೆ. ಈ ಹಿನ್ನೆಲೆಯಲ್ಲಿ ಗ್ರಾಹಕರಿಗೆ ಪೂರಕವಾಗಿರುವ ಸೌಲಭ್ಯಗಳನ್ನು ನೀಡುವುದು ಸಹಕಾರಿಗಳಿಗೆ ಅನಿವಾರ್ಯ. ಇಂಥಲ್ಲಿ ಸಹಕಾರಿಗಳ ಮುಖಾಂತರ ಚಿನ್ನದ ನಾಣ್ಯ ಮಾರಾಟವೂ ಒಂದು ವಿನೂತನ ಪ್ರಯೋಗವೆನಿಸಿದೆ.

ಒಳ್ಳೆಯ ಸಂಬಂಧ ಬೆಳೆಸುವುದು.

9. ಸಹಕಾರಿಯ ಸದಸ್ಯರಿಗೆ ಸೌಹಾರ್ದ ಕಾಯಿದೆಯ ವೈಶಿಷ್ಟ್ಯಗಳನ್ನು ಗುರುತಿಸಲು ತರಬೇತಿ ವ್ಯವಸ್ಥೆ ಮಾಡುವುದು.

10. ನಿಗಧಿಪಡಿಸಿದ ಅವಧಿಯೊಳಗೆ ಸಹಕಾರಿಯ ಲೆಕ್ಕಪರಿಶೋಧನೆ, ವರದಿಯ ಮೇಲೆ ಅನುಪಾಲನೆ ಸಹಕಾರಿಯ ಆಡಳಿತ ಮಂಡಳಿಗೆ ಚುನಾವಣೆ, ಸಾಮಾನ್ಯ ಸಭೆ, ಆಡಳಿತ ಮಂಡಳಿ ಮತ್ತು ಉಪಸಮಿತಿಗಳ ಸಭೆ ನಡೆಸುವ ವಿಧಿವಿಧಾನಗಳಿಗೆ ನಿಯಮ ರೂಪಿಸುವುದು.

11. ಆಡಳಿತ ಮಂಡಳಿಗೆ ಸ್ಥಾನ ಖಾಲಿಯಾದಾಗ ಅವುಗಳ ಭರ್ತಿ ವಿಧಾನಗಳನ್ನು ರೂಪಿಸುವುದು.

12. ಸಹಕಾರಿಯು ನಿರ್ವಹಿಸಬೇಕಾದ ವ್ಯವಹಾರ ಮತ್ತು ಸೇವೆಗಳನ್ನು ತ್ವರಿತವಾಗಿ, ಪಾರದರ್ಶಕತೆಯಿಂದ ಮತ್ತು ಸ್ವಾರ್ಥರಹಿತ ನೀತಿ ರೂಪಿಸುವುದು.

13. ಸದಸ್ಯರಿಗೆ ಕೊಡಮಾಡಿದ ಸವಲತ್ತುಗಳನ್ನು ಅವಧಿಯೊಳಗೆ ಮರುಪಾವತಿಮಾಡಲು ವ್ಯವಸ್ಥೆ ಮಾಡುವುದು – ಸವಲತ್ತುಗಳನ್ನು ಮಂಜೂರಿ ಮಾಡುವಾಗ ಸದಸ್ಯನ ಅರ್ಹತೆ ಅವಶ್ಯಕತೆ, ಶಕ್ತಿ ಮತ್ತು ಭದ್ರತೆಗಳನ್ನು ತುಲನಾತ್ಮಕವಾಗಿ ಪರಿಶೀಲಿಸಿ ಮಂಜೂರಿ ಮಾಡುವುದು.

14. ಸಹಕಾರಿಯ ನೌಕರರನ್ನು ಜವಾಬ್ದಾರಿಯುತ ಕಾರ್ಯ ನಿರ್ವಹಿಸುವಂತೆ ಮಾಡುವುದು – ನೇಮಕಾತಿ ಸಂದರ್ಭದಲ್ಲಿ ಸ್ವಜನ ಪಕ್ಷಪಾತ, ಸ್ವಾರ್ಥದಿಂದ ಮಾಡದಂತೆ ಕ್ರಮವಿಡುವುದು.

15. ಆಡಳಿತ ಮಂಡಳಿ ಸಭೆಗಳಲ್ಲಿ ಭಾಗವಹಿಸಿ ಸದಸ್ಯರ ಹಿತಾಸಕ್ತಿಗೆ ಪೂರಕವಾಗಿ ತೀರ್ಮಾನ ತೆಗೆದುಕೊಳ್ಳಲು ಸಹಕರಿಸುವುದು.

16. ನಿರ್ದೇಶಕರು ಅವಧಿ ಮುಕ್ತಾಯವಾಗುವ ಪೂರ್ವದಲ್ಲಿ ಹೊಸ ಆಡಳಿತ ಮಂಡಳಿ ರಚನೆಗೆ ಕ್ರಮ ಜರುಗಿಸುವುದು.

17. ನಿರ್ದೇಶಕರು ಸಹಕಾರಿಯ ಹಿತಾಸಕ್ತಿಗೆ ವಿರುದ್ಧ ನಿಲುವು/ಸದಸ್ಯರ ಹಿತಾಸಕ್ತಿಗೆ ವಿರುದ್ಧ ಕ್ರಮವಿಡುತ್ತಿದ್ದರೆ, ಅಂತಹ ನಿರ್ದೇಶಕರ ಮೇಲೆ ಕ್ರಮವಿಡುವುದು.

18. ಪದಾಧಿಕಾರಿಗಳು ಸಹಹಾರಿಯ ಮತ್ತು ಸಹಕಾರಿಯ ಸದಸ್ಯರ ಹಿತ ಕಾಪಾಡಲು ಶ್ರಮಿಸದಿದ್ದರೆ, ಅಥವಾ ಸ್ವಾರ್ಥಕ್ಕೆ ಸಹಕಾರಿ ಬಳಸಿಕೊಳ್ಳುತ್ತಿದ್ದರೆ – ಅವರುಗಳ ಮೇಲೆ ಸಂಘಟಿತವಾಗಿ ಕ್ರಮ ಜರುಗಿಸುವುದು.

19. ಸಹಕಾರಿಯ ವ್ಯವಹಾರ ಸಮರ್ಪಕವಾಗಿ ನಡೆಯದಿದ್ದರೆ ಅಥವಾ ಅವ್ಯವಹಾರವಾಗಿದ್ದರೆ/ ವಾಗುತ್ತಿದ್ದರೆ, ನಿಬಂಧಕರಿಂದ ವಿಚಾರಣೆ ನಡೆಸಲು ಕ್ರಮವಿಡುವುದು.

20. ಒಂದು ಸಹಕಾರಿಯು ಕಾರ್ಯ ನಿರ್ವಹಿಸದೇ ಇದ್ದಾಗ, ಆ ಸಹಕಾರಿಯನ್ನು ಸ್ವಯಂ ಸಮಾಪನೆ ಮಾಡಲು ಸಹಕರಿಸುವುದು ಅಥವಾ ನಿಬಂಧಕರಿಂದ ಸಮಾಪನೆ ಮಾಡುವಂತೆ ಕ್ರಮ ಜರುಗಿಸುವುದು.

21. ಸಹಕಾರಿಯು ನಡೆಸುವ ಸಾಮಾನ್ಯ ಸಭೆ, ಆಡಳಿತ ಮಂಡಳಿ ಸಭೆ ಮತ್ತಿತರ ಸಭೆಗಳಲ್ಲಿ ಸಕ್ರಿಯವಾಗಿ ಭಾಗವಹಿಸಿ– ಸದಸ್ಯರ ಅನುಕೂಲಕ್ಕಾಗಿ ಶ್ರಮಿಸುವುದು.



22. ಸಹಕಾರಿಯ ಉಪನಿಯಮಗಳಲ್ಲಿ ನಮೂದಿಸಿರುವ ಧ್ಯೇಯೋದ್ದೇಶಗಳನ್ನು ಜಾರಿಗೆ ತರಲು ಶ್ರಮಿಸುವುದು.

23. ಸದಸ್ಯರಿಗೆ, ನಿರ್ದೇಶಕರಿಗೆ ಮತ್ತು ನೌಕರರಿಗೆ ನೀತಿ ಸಂಹಿತೆ ರೂಪಿಸುವುದು ಮತ್ತು ಜಾರಿಯಾಗುವಂತೆ ನೋಡಿಕೊಳ್ಳುವುದು. ಮತ್ತು ಸಾಮಾನ್ಯ ಸಭೆ ಒಪ್ಪಿಗೆ ಪಡೆಯುವುದು.

24. ಕಾಯಿದೆ ಮತ್ತು ಉಪನಿಯಮಗಳಡಿಯಲ್ಲಿ ನಿಗಧಿಪಡಿಸಿದಂತೆ ಆಡಳಿತ ಮಂಡಳಿ ಸಭೆ, ಸಾಮಾನ್ಯ ಸಭೆ, ವಿಶೇಷ ಮಹಾಸಭೆ ಮತ್ತು ಉಪಸಮಿತಿ ಸಭೆಗಳನ್ನು ನಡೆಸುವುದು.

25. ಸಹಕಾರಿಯ ಉಪನಿಯಮಗಳಡಿ ನಿಗಧಿಪಡಿಸಿದ ಧ್ಯೇಯೋದ್ದೇಶಗಳನ್ನು ಜಾರಿ ಮಾಡಲು ಕ್ರಮ ಜರುಗಿಸುವುದು.

26. ಸಂಯುಕ್ತ ಸಹಕಾರಿ ಹೆಸರಿಸಿದ ವ್ಯಕ್ತಿಗಳಿಂದ ಸಹಕಾರಿಯ ಲೆಕ್ಕಪರಿಶೋಧನೆ ನಡೆಸಲು ಅನುಪಾಲನಾ ವರದಿ ತಯಾರಿಸುವುದು ಮತ್ತು ಸಾಮಾನ್ಯ ಸಭೆಯಲ್ಲಿ ಒಪ್ಪಿಗೆ ಪಡೆಯುವುದು.

27. ನಿರ್ದೇಶಕರ ಮಂಡಳಿಯ ಅವಧಿ ಮುಗಿಯುವ ಪೂರ್ವದಲ್ಲಿ ಹೊಸ ಆಡಳಿತ ಮಂಡಳಿ ಚುನಾವಣೆಗೆ ಕ್ರಮವಿಡುವುದು.

28. ವಿವಿಧ ಪ್ರಾಧಿಕಾರಗಳಿಗೆ ಸಲ್ಲಿಸಬೇಕಾದ ತಃಖ್ತೆಗಳು, ಮಾಹಿತಿಗಳನ್ನು ಸಲ್ಲಿಸಲು ವ್ಯವಸ್ಥೆ ಮಾಡುವುದು.

29. ಸದಸ್ಯರು ಸಾಲ ಮರುಪಾವತಿ ಮಾಡದಿದ್ದರೆ, ಅವರ ಮೇಲೆ ದಾವಾ ದಾಖಲಿಸಲು ಕ್ರಮವಿಡುವುದು.

30. ಸಹಕಾರಿಯ ನೌಕರ ನೇಮಕಾತಿ, ನಿಯಂತ್ರಣ, ಮೇಲ್ವಿಚಾರಣೆ ಮತ್ತು ಶಿಸ್ತು ಕ್ರಮವನ್ನು ಜರುಗಿಸಲು ಆಡಳಿತ ಮಂಡಳಿ ಕ್ರಮವಿಡತಕ್ಕದ್ದು.

31. ಸಹಕಾರಿಯ ಸದಸ್ಯರ ಹಿತಾಸಕ್ತಿ ಕಾಪಾಡಲು ಹೊಸ ಯೋಜನೆಗಳನ್ನು ರೂಪಿಸಿ, ಸಾಮಾನ್ಯ ಸಭೆ ಒಪ್ಪಿಗೆ ಪಡೆಯುವುದು.

■

# ನಗುವಿನಿಂದ ದೀರ್ಘಾಯುಷಿಯಾದ ನಾರ್ಮನ್

ನಗು ಒಂದು ಯೋಗ. ನಗದಿದ್ದರೆ ಅದುವೇ ಒಂದು ರೋಗ ಎಂಬುದು ಎಲ್ಲರೂ ತಿಳಿದು ಕಾರ್ಯರೂಪಕ್ಕೆ ತಂದಲ್ಲಿ ಉತ್ತಮ ಆರೋಗ್ಯ ಹೊಂದುವುದರಲ್ಲಿ ಎರಡು ಮಾತಿಲ್ಲ. ಇದಕ್ಕೊಂದು ಉತ್ತಮ ಉದಾಹರಣೆ ಇಲ್ಲಿದೆ.

ಲಂಡನ್ನಿನಲ್ಲಿ ನಾರ್ಮನ್ ಎಂಬ ವ್ಯಕ್ತಿಗೆ ವಾಸಿಯಾಗದ ಕಾಯಿಲೆಯೊಂದು ಅಂಟಿಕೊಂಡಿತು. ಅವನನ್ನು ತಪಾಸಣೆ ಮಾಡಿದ ವೈದ್ಯರೂಬ್ಬರು ಇದೊಂದು ವಾಸಿ ಯಾಗದ ಕಾಯಿಲೆ. ಈ ಕಾಯಿಲೆಯಿಂದಾಗಿ ಸಮಯಕ್ಕೆ ಸರಿಯಾದ ಊಟೋಪಚಾರ ಹಾಗೂ ನಿದ್ದೆಗಳಿಂದ ಅವನು ವಂಚಿತನಾದ. ಇದರಿಂದ ಈ ವ್ಯಕ್ತಿಯು ಹೆಚ್ಚೆಂದರೆ ಇನ್ನು 6 ತಿಂಗಳು ಬದುಕ ಬಹುದು ಎಂದು ತಿಳಿಸಿದರು. ಇದನ್ನು ತಿಳಿದ ವ್ಯಕ್ತಿ ನಾರ್ಮನ್ ವೈದ್ಯರು ತಿಳಿಸಿದ ಉಪಾಯಗಳನ್ನು ಹಾಗೂ ಔಷಧೋಪಚಾರಗಳನ್ನು ಮಾಡುತ್ತ ಧೈರ್ಯ ದಿಂದಲೆ ದಿನ ಕಳೆಯಲಾರಂಭಿಸಿದ. ಹೀಗೆ ಒಂದು ದಿನ ಮಧ್ಯಾನ್ಹ ತನ್ನ ಮನೆಯಲ್ಲಿ ಕುಳಿತು ಟಿ.ವಿ.ನೋಡುತ್ತಿರುವಾಗ



ಹಾಸ್ಯ ಧಾರಾವಾಹಿಯೊಂದು ಬರುತ್ತಿತ್ತು. ಅದನ್ನು ನೋಡುತ್ತ ಹೊಟ್ಟೆ ತುಂಬ ನಗುತ್ತ ಕುಳಿತ. ಧಾರಾವಾಹಿ ಮುಗಿದ ಮೇಲೆ ಅವನಿಗೆ ನಿದ್ದೆ ಬಂದಿದ್ದು ಅವನಿಗೆ ಗೊತ್ತೆ ಆಗಲಿಲ್ಲ. ಸುಮಾರು 2 ಘಂಟೆಗಳ ಕಾಲ ಚೆನ್ನಾಗಿ ನಿದ್ದೆ ಮಾಡಿದ ಮೇಲೆ ಎಚ್ಚರವಾದಾಗ ಅವನಲ್ಲಿ ಏನೂ ಒಂದು ರೀತಿಯ ಲವಲವಿಕೆಯನ್ನು ಅವನೆ ಗಮನಿಸಿ ಮತ್ತೆ ಮತ್ತೆ ಪ್ರತಿದಿನ ಆ ಹಾಸ್ಯ ಧಾರಾವಾಹಿಯನ್ನು ನೋಡಲಾರಂಭಿಸಿದ. ಅವನ ಆರೋಗ್ಯ ಸುಧಾರಿಸಿ ಅವನ ವಾಸಿಯಾಗದ ಕಾಯಿಲೆ ಯಿಂದಲೂ ಗುಣಹೊಂದಿದ. ನಂತರ ಅವನ್ನು ಪರೀಕ್ಷಿಸಿದ ವೈದ್ಯರಿಗೆ ಆಶ್ಚರ್ಯವಾಯಿತಂತೆ. ಮುಂದೆ ಅವನು ದೀರ್ಘಾಯುಷಿಯಾದ ಸತ್ಯ ಘಟನೆಯಿದು. ಆದ್ದರಿಂದ ಪ್ರತಿಯೊಬ್ಬರೂ ನಗುವುದನ್ನು ರೂಢಿಸಿಕೊಳ್ಳಬೇಕು. ನಗುವೇ ಉತ್ತಮ ಆರೋಗ್ಯದ ದಿವ್ಯೌಷಧಿ.

▶▶ ವಸಂತ ಗೀತಾ ಹಿರೇಮಠ ಬೆಳಗಾವಿ



**ಸಿ.ಎನ್. ಪರಶಿವಮೂರ್ತಿ**
ಸಹಕಾರ ಸಂಘಗಳ
ನಿವೃತ್ತ ಅಪರ ನಿಬಂಧಕರು.

# ಸೌಹಾರ್ದ ಸಹಕಾರಿ ಕಾಯಿದೆಯಡಿ ನಿರ್ದೇಶಕರ ಮತ್ತು ಮುಖ್ಯ ಕಾರ್ಯನಿರ್ವಾಹಕರ ಹಕ್ಕು, ಕರ್ತವ್ಯ ಮತ್ತು ಜವಾಬ್ದಾರಿಗಳು




**"ಸದಸ್ಯರೇ ಸಂಪೂರ್ಣ ಒಡೆತನ ಹೊಂದಿರುವ, ನಿರ್ವಹಿಸುವ ಮತ್ತು ನಿಯಂತ್ರಿಸುವ ಸ್ವಸಹಾಯ ಮತ್ತು ಪರಸ್ಪರ ನೆರವಿನ ಮೇಲೆ ಆಧಾರಿತವಾದ ಸಹಕಾರಿ ತತ್ವಗಳಿಂದ ಮಾರ್ಗದರ್ಶನ ಪಡೆದ, ಜವಾಬ್ದಾರಿಯುತ ಸ್ಪರ್ಧಾತ್ಮಕ, ಸ್ವಾವಲಂಬಿ, ಆರ್ಥಿಕ ಉದ್ಯಮಗಳಾದ ಸಹಕಾರಿಗಳಿಗೆ ಮಾನ್ಯತೆ ಮತ್ತು ಅವುಗಳ ಸ್ವಯಂ ರಚನೆ"**

ಈ ಕಾಯಿದೆ ರಚನೆ ಮಾಡುವಾಗ, ಅದರೆ ಧ್ಯೇಯೋದ್ದೇಶವನ್ನು ಮೇಲ್ಕಂಡಂತೆ ವಿವರಿಸಿದೆ. ಈ ಮೇಲ್ಕಂಡ ವಾಕ್ಯದಲ್ಲಿ ಗಮನಿಸಬೇಕಾದ ಪದಗಳು

**1. ಸದಸ್ಯರ ಸಂಪೂರ್ಣ ಒಡೆತನ**
**2. ಸದಸ್ಯರೇ ನಿರ್ವಹಿಸುವ**
**3. ಸದಸ್ಯರೇ ನಿಯಂತ್ರಿಸುವ**
**4. ಸದಸ್ಯರ ಸ್ವಸಹಾಯ**
**5. ಸದಸ್ಯದ ಪರಸ್ಪರ ನೆರವು**
**6. ಸಹಕಾರಿ ತತ್ವಗಳ ಮಾರ್ಗದರ್ಶನ**
**7. ಸದಸ್ಯರ ಜವಾಬ್ದಾರಿಯುತ**
**8. ಸದಸ್ಯರ ಸ್ಪರ್ಧಾತ್ಮಕ**
**9. ಸದಸ್ಯರ ಆರ್ಥಿಕ ಸ್ವಾವಲಂಬಿ**

ಈ ಮೇಲ್ಕಂಡ ಒಂಬತ್ತು ಅಂಶಗಳನ್ನು ಗಮನಿಸಿದಾಗ ಸೌಹಾರ್ದ ಸಹಕಾರಿ ಸದಸ್ಯರಿಂದ, ಸದಸ್ಯರಿಗಾಗಿ, ನಿರ್ವಹಿಸುವ ಒಂದು ಸಂಸ್ಥೆ. ಪ್ರಮುಖ ವ್ಯಕ್ತಿ ಸಹಕಾರಿಯ ಸದಸ್ಯ ಪೂರಕವಾಗಿ ಗಮನಿಸಬೇಕಾದ ಮತ್ತೊಂದು ಪ್ರಮುಖ ವಿಷಯ – ಸಮಾನ ಮನಸ್ಕರು ತಮ್ಮ ಅಲ್ಪ ಸಂಪನ್ಮೂಲಗಳನ್ನು, ತಮ್ಮ ಆರ್ಥಿಕ ಬೆಳವಣಿಗೆಗಾಗಿ ಕ್ರೋಢಿಕರಿಸಿ ರೂಪಿಸಿಕೊಂಡ ಒಂದು ಏಳು ಸಹಕಾರಿ ತತ್ವಗಳು

**1. ಸ್ವಯಂಪ್ರೇರಿತ ಮುಕ್ತ ಸದಸ್ಯತ್ವ**
**2. ಪ್ರಜಾಸತ್ತಾತ್ಮಕ ಸದಸ್ಯ ಹತೋಟಿ**
**3. ಆರ್ಥಿಕ ಚಟುವಟಿಕೆಯಲ್ಲಿ ಸದಸ್ಯರ ಪಾಲು**
**4. ಸಹಕಾರಿಯ ಸ್ವಾಯತ್ತತೆ ಮತ್ತು ಸ್ವಾತಂತ್ರ್ಯ**
**5. ಶಿಕ್ಷಣ, ತರಬೇತಿ ಮತ್ತು ಪ್ರಚಾರ,**
**6. ಸಹಕಾರಿ ಸಂಸ್ಥೆಗಳ ಜೊತೆ ಸಹಕಾರ.**
**7. ಸಾಮಾಜಿಕ ಕಳಕಳಿ**

ಈ ಮೇಲ್ಕಂಡ ತತ್ವಗಳಲ್ಲಿ ನಂಬಿಕೆ ಇದ್ದ ವ್ಯಕ್ತಿಗಳು ಕೂಡಿ ತಮ್ಮ ಆರ್ಥಿಕ ಬೆಳವಣಿಗೆಗಾಗಿ ರಚಿಸಿಕೊಂ ಸಹಕಾರಿ. ಸಹಕಾರಿಯು ಒಂದು ಆರ್ಥಿಕ ಸಂಸ್ಥೆ – ಧರ್ಮ ಸಂಸ್ಥೆ ಅಲ್ಲ. ಅಥವಾ ಸಾಮಾಜಿಕ ಅಭಿವೃದ್ಧಿ ಸಂಸ್ಥೆಯೂ ಅಲ್ಲ.

ಈ ಹಿನ್ನಲೆಯಲ್ಲಿ ಸಂಯುಕ್ತ ಸಹಕಾರಿಯ ಅಧ್ಯಕ್ಷರು, ನಿರ್ದೇಶಕರು ಮತ್ತು ಮುಖ್ಯ ಕಾರ್ಯ ನಿರ್ವಹಿಸಬೇಕಾದ ಹಕ್ಕು, ಕರ್ತವ್ಯ ಮತ್ತು ಜವಾಬ್ದಾರಿಗಳು ಏನು ಎಂಬುದನ್ನು ಗಮನಿಸಬಹುದು. ಸೌಹಾರ್ದ ಸಹಕಾರಿಯ ಪದಾಧಿಕಾರಿಗಳು ಪ್ರಥಮವಾಗಿ ಗುರುತಸಲೇಬೇಕಾದ ಮುಖ್ಯ ಅಂಶ ಸದಸ್ಯರ ಅಗತ್ಯವನ್ನು ಪೂರೈಸುವುದು.

**ನಿರ್ದೇಶಕರು ನಿರ್ವಹಿಸಬೇಕಾದ ಜವಾಬ್ದಾರಿಗಳು ಮತ್ತು ಕರ್ತವ್ಯಗಳು :**

1. ಪ್ರತಿಯೊಂದು ಸೌಹಾರ್ದ ಸಹಕಾರಿ ನೋಂದಣಿಯಾದ ದಿನಾಂಕದಂದೇ ಸಂಯುಕ್ತ ಸಹಕಾರಿಯ ಸದಸ್ಯರಾಗುತ್ತಾರೆ. ಇದನ್ನು ದೃಢೀಕರಿಸಿಕೊಳ್ಳುವುದು. ಪ್ರತಿಯೊಂದು ಜಿಲ್ಲಾ ಸಂಯುಕ್ತ ಸಹಕಾರಿಯ ನಿರ್ದೇಶಕ, ಜಿಲ್ಲಾ ಅಧಿಕಾರಿಗಳನ್ನು ಸಂಪರ್ಕಿಸಿ ನೋಂದಣಿ ಪ್ರಮಾಣ ಪತ್ರ ಮತ್ತು ಉಪನಿಯಮಗಳ ಒಂದು ಪ್ರತಿಯನ್ನು ಸಂಯುಕ್ತ ಸಹಕಾರಿಗೆ ರವಾನಿಸಲಾಗಿದೆಯೇ ಎಂಬುದನ್ನು ದೃಢೀಕರಿಸಿಕೊಳ್ಳುವುದು.
2. ಸದಸ್ಯ ಸಹಕಾರಿಗಳು ಅವರ ಉಪನಿಯಮಗಳಂತೆ ಕಾರ್ಯನಿರ್ವಹಿಸುತ್ತಿದ್ದಾರೆಂದು ದೃಢೀಕರಿಸಿಕೊಳ್ಳತಕ್ಕದ್ದು. ಯಾವುದೇ ಸಹಕಾರಿ ಉಪನಿಯಮಗಳನ್ನು ಪಾಲಿಸುತ್ತಿಲ್ಲವೆಂದು ಸಂಯುಕ್ತ ಸಹಕಾರಿ ನಿರ್ದೇಶಕರ ಗಮನಕ್ಕೆ ಬಂದಾಗ ಅಥವಾ ತಂದಾಗ, ಅದರ ಬಗ್ಗೆ ತುರ್ತು ಕ್ರಮ ಜರುಗಿಸುವಂತೆ ಸಂಯುಕ್ತ ಸಹಕಾರಿಯ ಮಂಡಳಿಯಲ್ಲಿ ದಾಖಲೆಗಳ ಆಧಾರದ ಮೇಲೆ ಚರ್ಚಿಸಿ ಕ್ರಮ ಜರುಗಿಸುವಂತೆ ಮಾಡತಕ್ಕದ್ದು.
3. ತಾನು ಆಯ್ಕೆಯಾದ ಜಿಲ್ಲಾ ಪ್ರತಿನಿಧಿಯಾಗಿ ಆ ಜಿಲ್ಲಾ ಸೌಹಾರ್ದ ಸಹಕಾರಿಗಳ ತೊಡಕುಗಳು/ತೊಂದರೆಗಳು/ಸಮಸ್ಯೆಗಳ ಬಗ್ಗೆ ಸಂಯುಕ್ತ ಸಹಕಾರಿ ಆಡಳಿತ ಮಂಡಳಿಯಲ್ಲಿ ದಾಖಲೆಗಳ ಸಮೇತ ಚರ್ಚಿಸಿ ತೀರ್ಮಾನಿಸಲು ಅನುವು ಮಾಟಿಕೊಡತಕ್ಕದ್ದು.
4. ಪ್ರತಿ ಸೌಹಾರ್ದ ಸಹಕಾರಿ, ಪ್ರತಿ ವರ್ಷ ವಾರ್ಷಿಕ ಮಹಾಸಭೆ ನಡೆಸಿದ್ದಾರೆಂದು ದೃಢೀಕರಿಸಿಕೊಳ್ಳತಕ್ಕದ್ದು. ನಡೆಸದಿದ್ದರೆ ಸಂಯುಕ್ತ ಸಹಕಾರಿ ಗಮನಕ್ಕೆ ತರತಕ್ಕದ್ದು.
5. ಪ್ರತಿಯೊಂದು ಸೌಹಾರ್ದ ಸಹಕಾರಿಯು, ಪ್ರತಿ ವರ್ಷ ತನ್ನ ಲೆಕ್ಕಪತ್ರಗಳನ್ನು ಸಂಯುಕ್ತ ಸಹಕಾರಿ ಹೊರಡಿಸಿದ ಪಟ್ಟಿಯಿಂದ ಲೆಕ್ಕಾಧಿಕಾರಿಗಳನ್ನು ನೇಮಿಸಿ, ಲೆಕ್ಕತಪಾಸಣೆ ಮಾಡಿಸಿ, ವಾರ್ಷಿಕ ಸಹಾಸಭೆಗೆ, ಅನುಪಾಲನಾ ವರದಿ ಜೊತೆ ಮಂಡಿಸಿ ಒಪ್ಪಿಗೆ ಪಡೆದ ಬಗ್ಗೆ ದೃಢೀಕರಿಸಿಕೊಳ್ಳತಕ್ಕದ್ದು. ಅದರ ಒಂದು ಪ್ರತಿಯನ್ನು ಸಂಯುಕ್ತ ಸಹಕಾರಿಗೆ ಮಂಡಿಸಲಾಗಿದೆಯೇ ಎಂಬುದನ್ನು ಪರಿಶೀಲಿಸುವುದು.
6. ಜಿಲ್ಲೆಯ ಯಾವುದೇ ಸಹಕಾರಿಯಲ್ಲಿ ನ್ಯೂನತೆಗಳು/ಹಣದುರುಪಯೋಗ/ಸ್ಥಾನ/ದುರುಪಯೋಗ ಮಾಡಿಕೊಂಡಿದ್ದರೆ, ಅದರ ಬಗ್ಗೆ ಮಾಹಿತಿ ಸಂಗ್ರಹಿಸಿ, ವಿಚಾರಣೆ ಮಾಡಲು ವ್ಯವಸ್ಥೆ ಮಾಡುವುದು ಹಾಗೂ ವರದಿಯಲ್ಲಿ ಆಡಳಿತ ಮಂಡಳಿಗೆ ಒತ್ತಾಯಿಸುವುದು – ದಾವಾ ಪ್ರಕರಣ/ ಕ್ರಿಮಿನಲ್ ಮೊಕದ್ದಮೆ ಹೂಡಲು ಕ್ರಮ ಜರುಗಿಸುವುದು – ಈ ಬಗ್ಗೆ ಗುರುತರ ನ್ಯೂನತೆಗಳಿದ್ದರೆ, ಸಂಯುಕ್ತ ಸಹಕಾರಿಗೆ ವರದಿ ಕಳುಹಿಸಿ, ಆಡಳಿತ ಮಂಡಳಿಯನ್ನು ರದ್ದು ಪಡಿಸಿ ವಿಶೇಷಾಧಿಕಾರಿ/ ಆಡಳಿತಾಧಿಕಾರಿ ನೇಮಿಸಲು ಕ್ರಮಜರುಗಿಸುವುದು.
7. ಉಪನಿಯಮಗಳಲ್ಲಿ ನ್ಯೂನತೆಗಳಿದ್ದು, ಸದಸ್ಯರಿಗೆ ಅನುಕೂಲ ಮಾಡಲು ಸಾಧ್ಯವಾಗದೇ ಇದ್ದರೆ, ಆ ಉಪನಿಯಮಗಳಿಗೆ ತಿದ್ದುಪಡಿ ತರಲು ಕ್ರಮ ಜರುಗಿಸುವುದು.
8. ಇತರ ಸೌಹಾರ್ದ ಸಹಕಾರಿಗಳು ಮತ್ತು ಮತ್ತಿತರ ಸಂಘ ಸಂಸ್ಥೆಗಳ ಜೊತೆ




ಪ್ರಸನ್ನ ವಿವಿಧೋದ್ದೇಶ ಸೌಹಾರ್ದ ಸಹಕಾರಿ ಮತ್ತು ಸಹಕಾರ ಭಾರತಿ ಹಾಗೂ ಇಫ್ಕೋ ಸಂಸ್ಥೆಗಳ ಸಂಯುಕ್ತ ಆಶ್ರಯದಲ್ಲಿ ಮಹಿಳಾ ದಿನಾಚರಣೆ.



ಹಂಸ ಚೈತನ್ಯ ಸೌಹಾರ್ದ ಕ್ರೆಡಿಟ್ ಸೌರ ಶಕ್ತಿ ಉಪಕರಣಗಳು ಮತ್ತು ಸಾಲ ಸೌಲಭ್ಯದ ಮಾಹಿತಿ ಪ್ರಾತ್ಯಕ್ಷಿಕೆ





ಬಳ್ಳಾರಿ ಜಿಲ್ಲೆಯ ಹೊಸಪೇಟೆಯಲ್ಲಿ ಸಹಕಾರ ಭಾರತಿ ಹಾಗೂ ವಿವಿಧ ಸೌಹಾರ್ದ ಸಹಕಾರಿಗಳ ನೇತೃತ್ವದಲ್ಲಿ "ಸೌಹಾರ್ದ ಸಹಕಾರಿ ಸಮಾಗಮ" ಕಾರ್ಯಕ್ರಮದಲ್ಲಿ ಸಂಯುಕ್ತ ಸಹಕಾರಿ ಅಧ್ಯಕ್ಷ ಶ್ರೀ ಎಸ್.ಆರ್.ಸತೀಶಚಂದ್ರ,ಸಹಕಾರ ಭಾರತಿ ರಾಷ್ಟ್ರೀಯ ಕಾರ್ಯದರ್ಶಿ ಶ್ರೀ ರಮೇಶ ವೈದ್ಯ,ಸಂಯುಕ್ತ ಸಹಕಾರಿ ನಿರ್ದೇಶಕ ಶ್ರೀ ಎಲ್.ಎಸ್.ಆನಂದ ಇವರುಗಳನ್ನು ಸನ್ಮಾನಿಸಲಾಯಿತು.



ಬೆಳಗಾವಿಯಲ್ಲಿ ಸಂಯುಕ್ತ ಸಹಕಾರಿಯ ವಿಭಾಗೀಯ ಕಚೇರಿಗೆ ಬೆಳಗಾವಿ ಶಾಸಕ ಶ್ರೀ ಸಂಜಯ ಪಾಟೀಲ್ ಅವರು ಭೇಟಿ ನೀಡಿ ಸೌಹಾರ್ದ ಸಹಕಾರಿ ಕ್ಷೇತ್ರದ ಅಭಿವೃದ್ಧಿ ಹಾಗೂ ಸಂಯುಕ್ತ ಸಹಕಾರಿಯ ಚಟುವಟಿಕೆಗಳ ಬಗ್ಗೆ ಚರ್ಚಿಸಿದರು.

ಈ ಸಂದರ್ಭದಲ್ಲಿ ಸಂಯುಕ್ತ ಸಹಕಾರಿಯ ಅಧ್ಯಕ್ಷ ಶ್ರೀ ಎಸ್. ಆರ್.ಸತೀಶಚಂದ್ರ, ಉಪಾಧ್ಯಕ್ಷ ಶ್ರೀ ಗುರುನಾಥ ಜ್ಯಾಂತಿಕರ, ನಿರ್ದೇಶಕ ಶ್ರೀ ರಾವಸಾಹೇಬ್ ಪಾಟೀಲ್, ಹಿರಿಯ ಸಹಕಾರಿಗಳಾದ ಶ್ರೀ ಬಿ.ಎಸ್.ಸುಲ್ತಾನಪುರಿ,ಶ್ರೀ ಆರ್. ಎಸ್. ಮುತಾಲಿಕ ಮುಂತಾದವರು ಉಪಸ್ಥಿತರಿದ್ದರು.

# ವಿವಿಧ ಸಹಕಾರಿಗಳಿಗೆ ಭೇಟಿ: ಕುಮಟಾದಲ್ಲಿ ಅವಲೋಕನಾ ಸಭೆ



ಕರ್ನಾಟಕ ರಾಜ್ಯ ಸೌಹಾರ್ದ ಸಹಕಾರಿಯ ಆದ್ಯಕ್ಷ ಶ್ರೀ ಎಸ್.ಆರ್.ಸತೀಶಚಂದ್ರರವರು ಕುಮಟಾದಲ್ಲಿ ಹವ್ಯಕ ಸೌಹಾರ್ದ ಸಹಕಾರಿ ,ಶಾಂತಿಕಾ ಪತ್ತಿನ ಸೌಹಾರ್ದ ಸಹಕಾರಿ ಹಾಗೂ ಶ್ರೀಮಾತಾ ವೈಭವಲಕ್ಷ್ಮೀ ಪತ್ತಿನ ಸೌಹಾರ್ದ ಸಹಕಾರಿಗಳಿಗೆ ಮತ್ತು ಬೆಳಗಾವಿಯ ಹಿಮಾಲಯ ಪತ್ತಿನ ಸೌಹಾರ್ದ ಸಹಕಾರಿ ಹಾಗೂ ಶ್ರೀಧರಸ್ವಾಮಿ ಪತ್ತಿನ ಸೌಹಾರ್ದ ಸಹಕಾರಿಗಳಿಗೆ ಭೇಟಿ ನೀಡಿ ಕಾರ್ಯಚಟುವಟಿಕೆಗಳನ್ನು ಪರಿಶೀಲನೆ ಮಾಡಿ ಸಹಕಾರಿಯ ಅಭಿವೃದ್ಧಿಗೆ ಸಲಹೆ ಹಾಗೂ ಮಾರ್ಗದರ್ಶನ ನೀಡಿದರು.

ಉತ್ತರ ಕನ್ನಡ ಜಿಲ್ಲೆಯ ಕರಾವಳಿ ತಾಲ್ಲೂಕುಗಳಾದ ಭಟ್ಕಳ, ಹೊನ್ನಾವರ, ಕುಮಟಾ, ಕಾರವಾರ ಹಾಗೂ ಅಂಕೋಲಾ ತಾಲ್ಲೂಕುಗಳ ಸೌಹಾರ್ದ ಸಹಕಾರಿಗಳ ಅವಲೋಕನಾ ಸಭೆ ದಿನಾಂಕ 26-5-2011 ರಂದು ಉತ್ತರ ಕನ್ನಡ ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕಿನ ಕುಮಟಾ ಶಾಖೆಯ ಸಭಾಂಗಣದಲ್ಲಿ ಸಂಯುಕ್ತ ಸಹಕಾರಿಯ ಅಧ್ಯಕ್ಷ ಶ್ರೀ ಎಸ್.ಆರ್.ಸತೀಶಚಂದ್ರರವರ ಅಧ್ಯಕ್ಷತೆಯಲ್ಲಿ ನಡೆಯಿತು.

ಕಾರ್ಯಕ್ರಮದ ಉದ್ಘಾಟನೆಯನ್ನು ಸಂಯುಕ್ತ ಸಹಕಾರಿಯ ಅಧ್ಯಕ್ಷ ಶ್ರೀ ಎಸ್.ಆರ್.ಸತೀಶಚಂದ್ರರವರು ದೀಪ ಬೆಳಗಿಸುವುದರ ಮೂಲಕ ನೆರವೇರಿಸಿದರು. ಸಂಯುಕ್ತ ಸಹಕಾರಿಯ ನಿರ್ದೇಶಕ ಶ್ರೀ ಭಾಸ್ಕರ ಹೆಗಡೆ ಕಾಗೇರಿಯವರು ಪ್ರಾಸ್ತಾವಿಕ ಭಾಷಣ ಮಾಡಿದರು. ಉತ್ತರ ಕನ್ನಡ ಜಿಲ್ಲಾ ಸಹಕಾರ ಯೂನಿಯನ್ ಅಧ್ಯಕ್ಷ ಶ್ರೀ ಡಿ.ಎಸ್.ಭಾಗವತ್ ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು. ಕಾರ್ಯಕ್ರಮದಲ್ಲಿ ಈ ವಿಭಾಗದ ಒಟ್ಟು 34 ಸೌಹಾರ್ದ ಸಹಕಾರಿಗಳ ಪೈಕಿ 29 ಸೌಹಾರ್ದ ಸಹಕಾರಿಗಳ 50 ಪ್ರತಿನಿಧಿಗಳು ಭಾಗವಹಿಸಿದ್ದರು. ಉಪಸ್ಥಿತರಿದ್ದ ಎಲ್ಲ ಸೌಹಾರ್ದ ಸಹಕಾರಿಗಳ ಕಾರ್ಯಚಟುವಟಿಕೆಗಳನ್ನು ಪರಿಶೀಲನೆಮಾಡಿ ಉತ್ತಮ ಕಾರ್ಯ ನಿರ್ವಹಣೆಗೆ ಮಾರ್ಗದರ್ಶನ ನೀಡಲಾಯಿತು.



## ಕುಮಟಾ ಜಿಲ್ಲಾ ಸಹಕಾರ ಯುನಿಯನ್ನಲ್ಲಿ ಸಂಯುಕ್ತ ಸಹಕಾರಿಯ ಅಧ್ಯಕ್ಷರಿಗೆ ಸನ್ಮಾನ ಹಾಗೂ ಕಟ್ಟಡ ನಿಧಿಗೆ ಧನಸಹಾಯ ಕೋರಿ ಮನವಿ ಸಲ್ಲಿಕೆ



ಸಂಯುಕ್ತ ಸಹಕಾರಿಯ ಅಧ್ಯಕ್ಷ ಶ್ರೀ ಎಸ್.ಆರ್.ಸತೀಶಚಂದ್ರರವರು ಜಿಲ್ಲಾ ಸಹಕಾರ ಯೂನಿಯನ್ ಅಧ್ಯಕ್ಷ ಶ್ರೀ ಡಿ.ಎಸ್.ಭಾಗವತ್ ಅವರ ವಿನಂತಿಯ ಮೇರೆಗೆ ಜಿಲ್ಲಾ ಸಹಕಾರ ಯುನಿಯನ್‌ಗೆ ಭೇಟಿ ನೀಡಿದಾಗ ಜಿಲ್ಲಾ ಸಹಕಾರ ಯೂನಿಯನ್ ವತಿಯಿಂದ ಶ್ರೀಯುತರನ್ನು ಶಾಲು ಹೊದಿಸಿ ಫಲತಾಂಬೂಲ ನೀಡಿ ಸನ್ಮಾನಿಸಿದರು. ಇದೇ ಸಂದರ್ಭದಲ್ಲಿ ಜಿಲ್ಲಾ ಸಹಕಾರ ಯುನಿಯನ್‌ಗೆ ಕಟ್ಟಡ ನಿಧಿಗಾಗಿ ಜಿಲ್ಲೆ ಎಲ್ಲ ಸೌಹಾರ್ದ ಸಹಕಾರಿಗಳಿಂದ ಧನ ಸಹಾಯ ಕೋರಿ ಮನವಿಪತ್ರ ಸಲ್ಲಿಸಿದರು.



# ಉಪ ವಿಧಿಗಳು

**ಭಾಗ – 4**

ಶ್ರೀ ವೈ. ಕುಮಾರ
ಉಪಪ್ರಧಾನ ವ್ಯವಸ್ಥಾಪಕರು

ಕರ್ನಾಟಕ ಸೌಹಾರ್ದ ಸಹಕಾರಿ ಅಧಿನಿಯಮ, 1997 ರಲ್ಲಿ ಒಟ್ಟು 72 ಕಲಂಗಳಿದ್ದು, (**Sections**) 12 ಅಧ್ಯಾಯಗಳಿವೆ. ಸೌಹಾರ್ದ ಸಹಕಾರಿ ಕಾಯ್ದೆಯ ಆಶಯ ಮತ್ತು ಮುಖ್ಯಾಂಶಗಳನ್ನು ಮುಂದಿನ 10 ಭಾಗಗಳಲ್ಲಿ ಚರ್ಚಿಸಬಹುದಾಗಿದೆ.

**ಉಪವಿಧಿ ಅರ್ಥ ವಿವರಣೆ :** ಉಪವಿಧಿಗಳನ್ನು, ಉಪನಿಯಮಗಳು, ಬೈಲಾ, ಪೋಟಾ ನಿಯಮಗಳು, ಹೀಗೆ ಬೇರೆ ಬೇರೆ ಹೆಸರುಗಳಿಂದ ಕರೆಯುವುದನ್ನು ಕಾಣಬಹುದಾಗಿದೆ. ಕಾನೂನಿಗೆ ಪೂರಕವಾಗಿ, ಕಾನೂನಿನ ಚೌಕಟ್ಟಿನೊಳಗೆ ಮಾಡಿಕೊಂಡಿರುವ ನಿಯಮಗಳನ್ನ ಉಪನಿಯಮಗಳು, ಉಪವಿಧಿಗಳು ಎಂದು ಕರೆಯಲಾಗುತ್ತದೆ.

ಉಪವಿಧಿಗಳು ಎಲ್ಲಾ ಸಂದರ್ಭಗಳಲ್ಲಿಯೂ ಸಹ ಕಡ್ಡಾಯವಾಗಿ ಸಂಬಂದಿಸಿದ ಕಾನೂನಿಗೆ ಪೂರಕವಾಗಿಯೇ ಇರತಕ್ಕದ್ದು. ಕಾಯ್ದೆಗೆ ವ್ಯತಿರಿಕ್ತವಾದ ಯಾವುದೇ ಪ್ರಾವಧಾನಗಳು ಉಪ ವಿಧಿಗಳಲ್ಲಿ ಇರತಕ್ಕದ್ದಲ್ಲ. ಒಂದು ವೇಳೆ ಕಾಯ್ದೆಗೆ ವ್ಯತಿರಿಕ್ತವಾಗಿ ಉಪ ವಿಧಿಗಳಲ್ಲಿ ಯಾವುದೇ ಅಂಶಗಳು ಇದ್ದರೆ, ಅವು ಅನೂರ್ಜಿತವಾಗುತ್ತವೆ. ಉದಾಹರಣೆಗೆ ಕರ್ನಾಟಕ ಸೌಹಾರ್ದ ಸಹಕಾರಿ ಅಧಿನಿಯಮ, 1997 ರ ಕಲಂ 24 (1) ರಲ್ಲಿ ಪ್ರಾಥಮಿಕ ಸಹಕಾರಿಗಳಲ್ಲಿ ನಿರ್ದೇಶಕರ ಸಂಖ್ಯೆಯು ಮುಖ್ಯ ಕಾರ್ಯನಿರ್ವಹಕನನ್ನು ಹೊರತುಪಡಿಸಿ, ಒಂಭತ್ತಕಿಂತ ಕಡಿಮೆ ಇರತಕ್ಕದ್ದಲ್ಲ ಮತ್ತು ಹದಿನೈದಕ್ಕಿಂತ ಹೆಚ್ಚಾಗಿರತಕ್ಕದ್ದಲ್ಲ. ನಮ್ಮ ಸಹಕಾರಿಗಳ ಉಪವಿಧಿಗಳಲ್ಲಿ ಇದರನ್ವಯವೇ ಅಂದರೆ 9 ಕ್ಕಿಂತ ಕಡಿಮೆಯಲ್ಲದ 15 ಕ್ಕಿಂತ ಜಾಸ್ತಿಯಲ್ಲದ ಸಂಖ್ಯೆಯ ಆಡಳಿತ ಮಂಡಳಿಯನ್ನು ಹೊಂದಿರತಕ್ಕದ್ದು. ಒಂದು ವೇಳೆ ನಮ್ಮ ಆಡಳಿತ ಮಂಡಳಿಯ ಸಂಖ್ಯೆ 8 ಅಂತಲೂ, ಅಥವಾ 18 ಅಂತಲೂ ಉಪವಿಧಿಗಳಲ್ಲಿ ನಮೂದಿಸಿದ್ದರೆ ಇದು ಅನೂರ್ಜಿತವಾಗುತ್ತದೆ.

**ಉಪವಿಧಿಗಳ ಪ್ರಾಮುಖ್ಯತೆ :** ಸಹಕಾರಿಯ ಸುಗಮ ಆಡಳಿತ ನಿರ್ವಹಣೆಗೆ, ಸಹಕಾರಿಯ ಧ್ಯೇಯೋದ್ಧೇಶಗಳ ಸ್ಪಷ್ಟೀಕರಣಕ್ಕೆ, ಕಾಯ್ದೆಯಲ್ಲಿ ಸ್ಪಷ್ಟಪಡಿಸದೇ, ಕಾಯ್ದೆಯನ್ವಯ ಸಹಕಾರಿಯ ಆಡಳಿತ ನಿರ್ವಹಣೆಗೆ ಅಗತ್ಯವಾದ ವಿಷಯಗಳ ಅಳವಡಿಕೆಗೆ ಉಪವಿಧಿಗಳು ಬೇಕೆ ಬೇಕು. ಉದಾಹರಣೆಗೆ ಸಹಕಾರಿಯ ಹೆಸರು, ನೊಂದಾಯಿತ ಕಛೇರಿ, ಸಹಕಾರಿಯ ಕಾರ್ಯವ್ಯಾಪ್ತಿ, ಅಧಿಕೃತ ಷೇರು ಬಂಡವಾಳ, ಸಹಕಾರಿಯ ಉದ್ದೇಶಗಳು, ಇತ್ಯಾದಿ ಅನೇಕ ವಿಷಯಗಳನ್ನು ಕಾಯ್ದೆಯಲ್ಲಿ ಸ್ಪಷ್ಟಪಡಿಸಲು ಸಾಧ್ಯವಿಲ್ಲ. ಹಾಗಾಗಿ ಈ ಎಲ್ಲಾ ವಿಷಯಗಳ ಸ್ಪಷ್ಟತೆಗೆ, ನಿಖರತೆಯ ದೃಷ್ಠಿಯಿಂದ ಉಪವಿಧಿಗಳ ಪ್ರಾಮುಖ್ಯತೆಯನ್ನ ತಿಳಿಯಬಹುದಾಗಿದೆ.

**ಕರ್ನಾಟಕ ಸೌಹಾರ್ದ ಸಹಕಾರಿ ಅಧಿನಿಯಮ, 1997ರ ಕಲಂ 10 ರಲ್ಲಿ ಉಪವಿಧಿಗಳ ಬಗ್ಗೆ ವಿವರಿಸಲಾಗಿದೆ.** ಕಲಂ 10 (1) ರಲ್ಲಿ ಈ ಅಧಿನಿಯಮದ ಉಪಬಂಧಗಳಿಗೆ ಅಥವಾ ನಿಯಮಗಳಿಗೆ ಒಳಪಟ್ಟು, ಪ್ರತಿಯೊಂದು ಸಹಕಾರಿಯು ಆ ಸಹಕಾರಿಯ ಉಪವಿಧಿಗಳಿಗೆ ಅನುಸಾರವಾಗಿ ಕಾರ್ಯನಿರ್ವಹಿಸತಕ್ಕದ್ದು. ಮತ್ತು ಸಹಕಾರಿಯ ಉಪವಿಧಿಗಳು ಸಾಧ್ಯವಿರುವಷ್ಟರ ಮಟ್ಟಿಗೆ ಸಹಕಾರಿ ತತ್ವಗಳಿಗೆ ಅನುಗುಣವಾಗಿರತಕ್ಕದ್ದು ಎಂದು ತಿಳಿಸುತ್ತದೆ.

**ಉಪವಿಧಿಗಳಲ್ಲಿ ಏನೆಲ್ಲ ವಿಷಯಗಳನ್ನು ಹೊಂದಿರಲೇಬೇಕು ಎಂದು ಕಲಂ 10(2)ರಲ್ಲಿ ವಿವರವಾಗಿ ವಿವರಿಸಲಾಗಿದೆ.**

I ಸಹಕಾರಿಯ ಹೆಸರು, ವಿಳಾಸ ಮತ್ತು ಕಾರ್ಯಾಚರಣೆಯ ಪ್ರದೇಶ.

II ಸಹಕಾರಿಯ ಉದ್ದೇಶಗಳು.

III ನಿರ್ದೇಶಕರು ಮತ್ತು ಪದಾಧಿಕಾರಿಗಳೂ ಸೇರಿದಂತೆ ಸದಸ್ಯತ್ವದ ಅರ್ಹತೆಯ ಷರತ್ತುಗಳು, ಸದಸ್ಯತ್ವಕ್ಕೆ ಅನರ್ಹತೆಗಳು ಹಾಗೂ ಸದಸ್ಯತ್ವವನ್ನು ನೀಡುವ, ಹಿಂತೆಗೆದುಕೊಳ್ಳುವ, ತೆಗೆದುಹಾಕುವ ಅಥವಾ ಮುಕ್ತಾಯಗೊಳಿಸುವ ಬಗೆಗಿನ ಕಾರ್ಯವಿಧಾನ.

III ಎ. ನಾಮಮಾತ್ರ ಸದಸ್ಯರು ಮತ್ತು ಸಹ ಸದಸ್ಯರದ್ದೂ ಸೇರಿದಂತೆ ಸದಸ್ಯತ್ವದ ಹಕ್ಕುಗಳು, ವಿಶೇಷ ಹಕ್ಕುಗಳು, ಕರ್ತವ್ಯಗಳು ಮತ್ತು ಹೊಣೆಗಾರಿಕೆಗಳು.

VI ಸಹಕಾರಿಯ ಸಿಬ್ಬಂದಿಗಳ ನೇಮಕಾತಿ ಮತ್ತು ಸೇವಾ ಷರತ್ತುಗಳು.

V ಮಂಡಲಿಯ ಸಭೆಗಳನ್ನು ನಡೆಸುವ ಕಾರ್ಯವಿಧಾನ, ಮತನೀಡುವ ಮತ್ತು ಚುನಾವಣೆಗಳಿಗೆ ಸ್ಪರ್ಧಿಸುವ ಹಕ್ಕೂ ಸೇರಿದಂತೆ ಸದಸ್ಯರ ಹಕ್ಕುಗಳು.

VI ಸದಸ್ಯನಿಂದ ಸಹಕಾರಿಗೆ ಬಾಕಿ ಇರುವ ಯಾವುದೇ ಮೊತ್ತ ಸಂದಾಯ ಮಾಡುವುದಕ್ಕೆ ತಪ್ಪಿದರೆ ಆಗುವ ಪರಿಣಾಮಗಳು.

VII ಸಾಮಾನ್ಯ ನಿಕಾಯದ ಅಧಿಕಾರಗಳು ಮತ್ತು ಪ್ರಕಾರ್ಯಗಳು ಮತ್ತು ಪ್ರಾತಿನಿಧಿಕ ಸಾಮಾನ್ಯ ನಿಕಾಯವು ಯಾವುದಾದರೂ ಇದ್ದರೆ ಅದರ ಚುನಾವಣಾ ವಿಧಾನ ಮತ್ತು ಸಾಮಾನ್ಯ ನಿಕಾಯ ಮತ್ತು ಪ್ರಾತಿನಿಧಿಕ ಸಾಮಾನ್ಯ ನಿಕಾಯವು ಯಾವುದಾದರೂ ಇದ್ದಲ್ಲಿ, ಅದು ವ್ಯವಹರಿಸಬೇಕಾದ ವಿಷಯಗಳು.

VIII ಸಾಮಾನ್ಯ ಸಭೆಗಳನ್ನು ನಡೆಸಬೇಕಾದ ವಿಧಾನ ಮತ್ತು ಅಂತರ ಮತ್ತು ಅದಕ್ಕೆ ಅಗತ್ಯವಿರುವ ಕೋರಂ.

IX ಕೈಬಿಡಲಾಗಿದೆ.

X ಮಂಡಲಿಯ ರಚನೆ ಹಾಗೂ ಪದಾಧಿಕಾರಿಗಳ ಸಂಖ್ಯೆ;

XI ಷೇರು ಬಂಡವಾಳ, ಠೇವಣಿಗಳ, ಡಿಬೆಂಚರುಗಳ, ಸಾಲಗಳ ಮತ್ತು ಸರ್ಕಾರದ ವಂತಿಗೆಗಳಲ್ಲದೆ ಸದಸ್ಯರಿಂದ ಬರುವ ಇತರ ವಂತಿಗೆಗಳ ರೂಪದಲ್ಲಿ ನಿಧಿಗಳನ್ನು ಸಂಗ್ರಹಿಸುವ ವ್ಯಾಪ್ತಿ ಮತ್ತು ಷರತ್ತುಗಳು;

XII ಅಧ್ಯಕ್ಷ ಅಥವಾ ಸಭಾಪತಿಯ ಅಧಿಕಾರಗಳು, ಪ್ರಕಾರ್ಯಗಳು ಮತ್ತು ಕರ್ತವ್ಯಗಳು;

XIII ಮುಖ್ಯಕಾರ್ಯನಿರ್ವಾಹಕನ ಅಧಿಕಾರಗಳು, ಪ್ರಕಾರ್ಯಗಳು ಮತ್ತು ಕರ್ತವ್ಯಗಳು;

XIV ಸಹಕಾರಿಯು ಸದಸ್ಯೇತರರೊಂದಿಗೆ ವ್ಯವಹರಿಸಬಹುದಾದ ನಿಬಂಧನೆಗಳು ಮತ್ತು ಷರತ್ತುಗಳು;

XV ಒಕ್ಕೂಟ ಸಹಕಾರಿಗಳಿಗೆ ಮತ್ತು ಸಂಯುಕ್ತ ಸಹಕಾರಿಗೆ ಪ್ರತಿನಿಧಿಗಳನ್ನು ಚುನಾಯಿಸುವ ವಿಧಾನ;

XVI ಸಹಕಾರಿಯ ಅಧಿಕೃತ ಷೇರು ಬಂಡವಾಳದ ಸ್ವರೂಪ ಮತ್ತು ಮೊಬಲಗು;

XVII ಒಬ್ಬ ಸದಸ್ಯನು ಹೊಂದಬಹುದಾದ ಗರಿಷ್ಠ ಷೇರುಗಳು;

XVIII ಸಂದಾಯಿತ ಷೇರು ಬಂಡವಾಳದ ಮೇಲೆ ಸದಸ್ಯರಿಗೆ ಸಂದಾಯ ಮಾಡಬಹುದಾದ ಗರಿಷ್ಠ ಲಾಭಾಂಶ;

XIX ನಿಧಿಗಳನ್ನು ಬಳಸಬಹುದಾದ ಉದ್ದೇಶಗಳು;

XX ಸಂಯುಕ್ತ ಸಹಕಾರಿಯ ನಿಧಿಗೆ ವಂತಿಗೆ ಮತ್ತು ವಿವಿಧ ನಿಧಿಗಳ ರಚನೆ ಮತ್ತು ಅವುಗಳ ಉದ್ದೇಶಗಳು;

XXI ನಿವ್ವಳ ಲಾಭದಲ್ಲಿ ಮುಖ್ಯವಾಗಿ ಈ ಮುಂದಿನವುಗಳ ಬಗ್ಗೆ ಹಣದ ವಿನಿಯೋಗ:

ಎ. ಸಹಕಾರಿಯು ರಚಿಸಿದ ಮೀಸಲು ನಿಧಿಗೆ ಶೇಕಡ ಇಪ್ಪತ್ತೈದು;

ಬಿ. ಸಹಕಾರಿ ಶಿಕ್ಷಣ ನಿಧಿಗೆ ಶೇಕಡ ಮೂರು, ಇದರಲ್ಲಿ ಶೇಕಡ ಒಂದರಷ್ಟು ಸಂಯುಕ್ತ ಸಹಕಾರಿಯ ಸಹಕಾರಿ ಶಿಕ್ಷಣ ನಿಧಿಗೆ ಮತ್ತು ಬಾಕಿಯನ್ನು ಕರ್ನಾಟಕ ರಾಜ್ಯ ಸಹಕಾರ ಮಹಾಮಂಡಳ ನಿಯಮಿತ, ಬೆಂಗಳೂರು ಇದರ ಸಹಕಾರಿ ಶಿಕ್ಷಣ ನಿಧಿಗೆ;

ಸಿ. ಕೈಬಿಡಲಾಗಿದೆ.

ಡಿ. ಅನಿರೀಕ್ಷಿತ ನಷ್ಟಗಳು ಅಥವಾ ಸಾದಿಲ್ವಾರು ವೆಚ್ಚಗಳನ್ನು ಭರಿಸಲು ಕಾರ್ಯಾಚರಣಾ ಮೀಸಲಿನ ಬಗ್ಗೆ ಶೇಕಡ ಇಪ್ಪತು;

ಇ. ಸಾಮಾನ್ಯ ನಿಕಾಯವು ಅನುಮೋದಿಸಿರುವ ಉದ್ದೇಶಕ್ಕಾಗಿ ಸಾಮಾನ್ಯ ಕ್ಷೇಮ ನಿಧಿಗೆ ಶೇಕಡ ಐದು;

ಎಫ್.ನೌಕರರಿಗೆ ಸಂದಾಯ ಮಾಡಬೇಕಾದ ಎರಡು ತಿಂಗಳ ವೇತನವನ್ನು ಮೀರದ ಬೋನಸ್ಸು;

ಜಿ. ಸದಸ್ಯರಿಗೆ ಲಾಭಾಂಶ;

XXII ಸಹಕಾರಿಗೆ ಉಂಟಾಗಿರುವ ಕಾರ್ಯಾಚರಣಾ ಕೊರತೆಯನ್ನು ಅದರ ಮೀಸಲು ನಿಧಿ ಮತ್ತು ಕಾರ್ಯಾಚರಣಾ ಮೀಸಲು ನಿಧಿಯಿಂದ ತುಂಬಲು ಪ್ರಮಾಣವನ್ನು ಮತ್ತು ಕಾರ್ಯವಿಧಾನವನ್ನು ನಿರ್ಧರಿಸುವುದು;

XXIII ಲೆಕ್ಕ ಪರಿಶೋಧಕರ ಅಥವಾ ಚಾರ್ಟರ್ಡ ಅಕೌಂಟೆಂಟರ ನೇಮಕಾತಿ ವಿಧಾನ ಮತ್ತು ಅವರ ಅಧಿಕಾರಗಳು ಮತ್ತು ಪ್ರಕಾರ್ಯಗಳು;

XXIV ಸಹಕಾರಿಯು ಸಮಾಪನೆಗೊಳ್ಳುತ್ತಿರುವಾಗ ನಿಧಿಗಳನ್ನು ವಿಲೆ ಮಾಡುವ ವಿಧಾನ;

XXV ಸಹಕಾರಿಯನ್ನು ಸಮಾಪನ ಮಾಡುವ ಸಂದರ್ಭಗಳು ಮತ್ತು ವಿಧಾನ; ಮತ್ತು

XXVI ಉಪವಿಧಿಗಳಲ್ಲಿ ಉಪಬಂಧ ಕಲ್ಪಿಸುವ ಅಗತ್ಯವಿರುವ ಅಥವಾ ಕಲ್ಪಿಸಬಹುದಾದ ಇತರ ಯಾವುದೇ ವಿಷಯ.



ಈ ಅಧಿನಿಯಮದಲ್ಲಿ ತದ್ವಿರುದ್ಧವಾದುದೇನೇ ಇದ್ದರೂ, ಒಂದು ಸಹಕಾರಿಯ ಸಂಬಂಧದಲ್ಲಿ ಅದು ಠೇವಣಿಗಳನ್ನು ಸ್ವೀಕರಿಸುವುದಕ್ಕೆ. ನಿಧಿಗಳನ್ನು ಸಾಲವಾಗಿ ಪಡೆಯುವುದಕ್ಕೆ, ಮೀಸಲು ನಿಧಿಯ ನಿರ್ವಹಣೆಗೆ, ಲಾಭದ ವಿನಿಯೋಗಕ್ಕೆ, ಸಾಲ ನೀಡಿಕೆಗೆ, ಠೇವಣಿಗಳ ಮತ್ತು ಮುಂಗಡಗಳ ಮೇಲೆ ಬಡ್ಡಿ ದರಗಳನ್ನು ನಿಗದಿಪಡಿಸುವುದಕ್ಕೆ ಸಂಬಂಧಪಟ್ಟಂತೆ ಮತ್ತು ಬ್ಯಾಂಕಿಂಗ್ ನಿಯಂತ್ರಣ ಅಧಿನಿಯಮ, 1949ರ 6ನೇ ಪ್ರಕರಣದ ಅಡಿಯಲ್ಲಿ ಹೇಳಲಾದ ಸಹಕಾರಿ ಸಂಘಗಳಿಗೆ ಅನ್ವಯವಾಗುವ ಅಂಥ ಇತರ ಚಟುವಟಿಕೆಗಳಿಗೆ ಸಂಬಂಧಿಸಿದಂತೆ (2) ನೇ ಉಪ ಪ್ರಕರಣದ ಅಡಿಯಲ್ಲಿ ರಚಿಸಿದ ಉಪವಿಧಿಗಳು, ಸದರಿ ಅಧಿನಿಯಮದ ಅಥವಾ ಅದರ ಅಡಿಯಲ್ಲಿ ರಿಸರ್ವ್ ಬ್ಯಾಂಕ್ ಅಥವಾ ರಾಷ್ಟ್ರೀಯ ಬ್ಯಾಂಕ್ ಕಾಲ ಕಾಲಕ್ಕೆ ರಚಿಸಿದ ನಿಯಮಗಳ, ವಿನಿಯಮಗಳ ಉಪಬಂಧಗಳಿಗೆ ಅಥವಾ ಹೊರಡಿಸಿದ ನಿರ್ದೇಶನಗಳಿಗೆ ಒಳಪಟ್ಟಿರತಕ್ಕದ್ದು ಎಂದು ಕಾಯ್ದೆ ಕಲಂ 10(3)ರಲ್ಲಿ ತಿಳಿಸಿದೆ.



**ರಾಜ್ಯದ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳ ಸಭೆಯಲ್ಲಿ ನಡೆದ ಪ್ರಶ್ನೋತ್ತರ ಅಧಿವೇಶನದಲ್ಲಿನ ಆಯ್ದ ಕೆಲವು ಪ್ರಶ್ನೆಗಳಿಗೆ ಉತ್ತರಗಳನ್ನು, ಎಲ್ಲ ಸೌಹಾರ್ದ ಸಹಕಾರಿಗಳ ಮಾಹಿತಿ ಹಾಗೂ ಅನುಕೂಲತೆಗಾಗಿ ಪ್ರಕಟಿಸಲಾಗಿದೆ. "ಕಲಂ" ಎಂದರೆ ಕರ್ನಾಟಕ ಸೌಹಾರ್ದ ಸಹಕಾರಿ ಅಧಿನಿಯಮ 1997ರ ಕಲಂ, "ನಿಯಮ" ಎಂದರೆ ಕರ್ನಾಟಕ ಸೌಹಾರ್ದ ಸಹಕಾರಿ ನಿಯಮಗಳು 2004ರ ನಿಯಮಗಳು ಎಂದು ಓದಿಕೊಳ್ಳತಕ್ಕದ್ದು.**

ಉತ್ತರಿಸಿದವರು : ಶ್ರೀ ಕಾಂತ್ ಬರುವೆ, ಕಾನೂನು ವಿಭಾಗದ ಅಧಿಕಾರಿ, ಸಂಯುಕ್ತ ಸಹಕಾರಿ.

1. ***A souharda cooperative has given a personal loan of `20000/- to Mr.X and Mr.Y is the guarantor for the same. The financial position of the both loanee and guarantor is not good and they have requested to waive interest and/or principal. There is no point in filing court case. What procedure the cooperative should follow in the following situation?***

a) When interest is to be waived in full and principal is fully recoverable

b) When interest and principal is to be waived in full

c) When interest in full and part of the principal is to be waived.

In aforesaid circumstances cooperative should obtain approval from the general body for waive off the interest and/or principal amount or interest in full and part of the principal. The paramount authority is to take decision in this regard should be General Body. Without taking approval from the General Body cooperative can't give rebate or waive off to any loan amount.

2. ***'A' souharda cooperative is desirous of either buying an office building or constructing the same out of its own funds. What procedure should the cooperative follow? Does the cooperative need to take authority's permission like AR, Souharda Federal?***

For buying a building or constructing the same intended to have own office to cooperative out of their own fund any authority's permission is not required. With the prior approval by the General Body cooperative may buy or construct a building.

Sri Bhuvanendra Swamiji vividoddesha souharda Sahakari Ni., Mangalore

3. ***Do we need to register our Sahakari under Karnataka Labour Act?***

ANS: No, your cooperative need not be register any other labour laws, However cooperative need to follow The Minimum Wages Act, 1949, The Maternity Benefit Act, 1961, the payment of gratuity Act, 1972 and employees provident fund Act 1952(where number of employees exceeded more than a 50(if employees working without aid of the power). (If employees working with aid of the power therein 20 employees))

4. ***Do we need to apply for license under shop and Establishment Act?***

ANS: - if your cooperative is a 'commercial establishment' you need to get license under shop and establishment Act. Otherwise your cooperative need not be register under shop and Establishment Act.




5. ***Do we need to apply for a Trade License?***

ANS: If your cooperative engaging in trading activities in a way you have to obtain license from competent authority. Otherwise your cooperative need not be obtaining Trade License.

6. ***Do we need to register under Profession Tax? We have already received a notice from the profession tax officer in this regard.***

ANS: No, You are not liable to pay Profession Tax, unless enrolled under sec.5 (2) of the professional trade and calling Act.

In the Schedule 23 of the Professional Trade and calling Act, clearly reveals that;

The cooperative society's registered under Karnataka Cooperative Societies Act, 1959 are liable to pay profession tax. But nowhere in the schedules the cooperatives registered under Karnataka Souharda Sahakari Act, 1997 not included. You may write a letter to competent authority regarding profession tax with aforesaid contention.

If cooperative had VAT registration, then you liable to pay profession tax.

You may write letter to competent authority by asking that, under which provision of the Profession Tax Act we have covered?

7. ***Do we need to obtain/apply for any other registration/license under any other Act of the State Govt.?***

ANS: No, you are need not be obtain/apply for any other registration/license. However if you promote subsidiary organization or set up add on business, you may be registered under any law for the time being in force.

■

## ವಿಶ್ವ ಪರಿಸರ ದಿನಾಚರಣೆ 2010 ಶಿರಸಿಯ ಕದಂಬ ಸೌಹಾರ್ದ ಮಾರ್ಕೆಟಿಂಗ್ ಸಹಕಾರಿಗೆ

# "ಜೀವ ವೈವಿಧ್ಯ ಪ್ರಶಸ್ತಿ."

ಬೆಂಗಳೂರಿನಲ್ಲಿ ದಿನಾಂಕ 5/6/2011 ರಂದು ನಡೆದ ವಿಶ್ವ ಪರಿಸರ ದಿನಾಚರಣೆಯಲ್ಲಿ ಶಿರಸಿಯ ಕದಂಬ ಮಾರ್ಕೆಟಿಂಗ ಸೌಹಾರ್ದ ಸಹಕಾರಿಗೆ ಮಾನ್ಯ ಮುಖ್ಯಮಂತ್ರಿಗಳು ಜೀವ ವೈವಿಧ್ಯ ಪ್ರಶಸ್ತಿ ನೀಡಿ ಸನ್ಮಾನಿಸಿದರು. ಸಮಾರಂಭದಲ್ಲಿ ಪರಿಸರ ಸಚಿವ ಶ್ರೀ ಕೃಷ್ಣ ಪಾಲೇಮಾರ ಸಂಸದ ಶ್ರೀ ಡಿ.ಬಿ.ಚಂದ್ರೇಗೌಡ,ಶಾಸಕ ಶ್ರೀ ದಿನೇಶ್ ಗುಂಡೂರಾವ ಮುಂತಾದ ಗಣ್ಯರು ಭಾಗವಹಿಸಿದ್ದರು.

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ಅರಣ್ಯ ಸಚಿವ ಶ್ರೀ ಮಾತನಾಡಿ ಮಾಸಾಂತ್ಯಕ್ಕೆ ನೂತನ ಅರಣ್ಯ ನೀತಿ ಸಿದ್ಧವಾಗುತ್ತದೆ ಎಂದು ತಿಳಿಸಿ ಪ್ರಶಸ್ತಿ ವಿಜೇತರನ್ನು ಅಭಿನಂದಿಸಿದರು.




# ರಾಜ್ಯದಲ್ಲಿ ಸೌಹಾರ್ದ ಸಹಕಾರಿಗಳು ಉತ್ತಮವಾಗಿ ಕಾರ್ಯನಿರ್ವಹಿಸುತ್ತಿವೆ

– **ಶ್ರೀ ಉಮೇಶ,** ಪ್ರಧಾನ ಕಾರ್ಯದರ್ಶಿಗಳು, ಸಹಕಾರ ಇಲಾಖೆ




ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಹಾಗೂ Bangalore Branch of SIRC of ICAI ಇವರುಗಳ ಸಂಯುಕ್ತ ಆಶ್ರಯದಲ್ಲಿ ಚಾರ್ಟರ್ಡ್ ಅಕೌಂಟಂಟ್‌ಗಳಿಗಾಗಿ ಏರ್ಪಡಿಸಿದ್ದ ಕಾರ್ಯಾಗಾರವನ್ನು ಉದ್ಘಾಟಿಸಿ ಮಾತನಾಡುತ್ತ ಸಹಕಾರ ಇಲಾಖೆಯ ಪ್ರಧಾನ ಕಾರ್ಯದರ್ಶಿಗಳಾದ ಶ್ರೀ ಉಮೇಶರವರು ರಾಜ್ಯದಲ್ಲಿ 1684 ಸೌಹಾರ್ದ ಸಹಕಾರಿಗಳು ಕಾರ್ಯ ನಿರ್ವಹಿಸುತ್ತಿವೆ. ಇವುಗಳ ಕಾರ್ಯನಿರ್ವಹಣೆ ಉತ್ತಮವಾಗಿದೆ. ಸೌಹಾರ್ದ ಸಹಕಾರಿಗಳಲ್ಲಿ ಆರ್ಥಿಕ ಶಿಸ್ತು ಬೆಳವಣಿಗೆ ಅಗತ್ಯವಾಗಿದ್ದು ಆರ್ಥಿಕ ಶಿಸ್ತು ಬೆಳವಣಿಗೆಗಾಗಿ ಸನ್ನದು ಲೆಕ್ಕಪರಿಶೋಧಕರಿಗೆ ಈ ರೀತಿಯ ಕಾರ್ಯಾಗಾರಗಳು ಪ್ರಯೋಜನಕಾರಿ. ಸನ್ನದು ಲೆಕ್ಕಪರಿಶೋಧಕರಿಗೂ ಸೌಹಾರ್ದ ಸಹಕಾರಿಗಳ ಬೆಳವಣಿಗೆಯಲ್ಲಿ ಹೆಚ್ಚಿನ ಜವಾಬ್ದಾರಿ ಇದೆ ಎಂದು ತಿಳಿಸಿದರು.

Bangalore Branch of SIRC of ICAI ಇದರ ಅಧ್ಯಕ್ಷರಾದ ಶ್ರೀ ವೆಂಕಟೇಶ ಬಾಬುರವರು ಮಾತನಾಡಿ ಸೌಹಾರ್ದ ಕಾಯ್ದೆಯಡಿಯಲ್ಲಿ ಕಾರ್ಯನಿರ್ವಹಿಸುತ್ತಿರುವ ಸಹಕಾರಿಗಳ ಲೆಕ್ಕಪರಿಶೋಧನೆಯನ್ನು ಚಾರ್ಟರ್ಡ್ ಅಕೌಂಟಂಟ್‌ಗಳಿಗೆ ಕೊಟ್ಟ ಹಾಗೆ 1959ರ ಕಾಯ್ದೆಯಡಿಯಲ್ಲಿ ಕಾರ್ಯನಿರ್ವಹಿಸುತ್ತಿರುವ ಸಹಕಾರಿಗಳ ಲೆಕ್ಕಪರಿಶೋಧನೆಯನ್ನು ಕೂಡ ಚಾರ್ಟರ್ಡ್ ಅಕೌಂಟಂಟ್‌ಗಳಿಗೆ ಒದಗಿಸಿ ಕೊಡಲು ಮನವಿ ಮಾಡಿದರು ಹಾಗೂ ಸೌಹಾರ್ದ ಸಹಕಾರಿಗಳ ಲೆಕ್ಕ ಪರಿಶೋಧಕರ ಶುಲ್ಕವನ್ನು ಸಂಯುಕ್ತ ಸಹಕಾರಿಯು ನಿಗದಿಪಡಿಸಬೇಕೆಂದು ಕೋರಿದರು.

ಸಭೆಯ ಅಧ್ಯಕ್ಷತೆ ವಹಿಸಿದ್ದ ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿಯ ಅಧ್ಯಕ್ಷರಾದ ಶ್ರೀ ಎಸ್ ಆರ್ ಸತೀಶ್ಚಂದ್ರ ಮಾತನಾಡಿ ರಾಜ್ಯದಲ್ಲಿನ ಅನೇಕ ಹಿರಿಯ ಸಹಕಾರಿಗಳ ಪರಿಶ್ರಮದಿಂದ ಸೌಹಾರ್ದ ಕಾಯ್ದೆ ಜಾರಿಗೆ ಬಂದಿದೆ. ಈ 10 ವರ್ಷಗಳ ಅವಧಿಯಲ್ಲಿ ಸಾಕಷ್ಟು ಸಾದನೆ ಮಾಡಿರುವದಲ್ಲದೇ ಸರ್ಕಾರ ಮತ್ತು ಸಾರ್ವಜನಿಕರ ಮೆಚ್ಚುಗೆಗೆ ಪಾತ್ರವಾಗಿದೆ. ಸೌಹಾರ್ದ ಸಹಕಾರಿ ಚಳುವಳಿಯ ಬೆಳವಣಿಗೆಗಳಲ್ಲಿ ಹಾಗೂ ಹೆಚ್ಚಿನ ಸೌಹಾರ್ದ ಸಹಕಾರಿಗಳನ್ನು ಪ್ರಾರಂಬಿಸುವಲ್ಲಿ ಚಾರ್ಟರ್ಡ್ ಅಕೌಂಟಂಟ್‌ಗಳು ಸಹಕರಿಸಬೇಕೆಂದು ಕೋರಿದರು.ಸಂಯುಕ್ತ ಸಹಕಾರಿಯ ವ್ಯವಸ್ಥಾಪಕ ನಿರ್ದೇಶಕರಾದ ಶ್ರೀ ಶರಣಗೌಡ ಜಿ ಪಾಟೀಲ್ ಸ್ವಾಗತಿಸಿದರು.

ICAI ಬೆಂಗಳೂರು ಶಾಖೆಯ ಕಾರ್ಯ ದರ್ಶಿಗಳಾದ ಶ್ರೀ ಎಸ್ ಎನ್ ರವೀಂದ್ರನಾಥ ವಂದನಾರ್ಪಣೆ ಮಾಡಿದರು. ಕಾರ್ಯಕ್ರಮದಲ್ಲಿ ಸಂಯುಕ್ತ ಸಹಕಾರಿಯ ನಿರ್ದೇಶಕರುಗಳಾದ ಶ್ರೀ ಬಿ ಹೆಚ್ ಕೃಷ್ಣಾರೆಡ್ಡಿ, ಶ್ರೀಮತಿ ಎಚ್ ಸಿ ನಾಗರತ್ನ, ಶ್ರೀ ಆಂಜನೇಯ ಗುಪ್ತ ಹಾಗೂ ICA ಬೆಂಗಳೂರು ಶಾಖೆಯ ಪದಾಧಿಕಾರಿಗಳು ಭಾಗವಹಿಸಿದ್ದರು. ವಿಷಯ ಪ್ರಸ್ತಾವನೆ ಹಾಗೂ ಅಧಿವೇಶನವನ್ನು ಶ್ರೀ ಬಿ ವಿ ರವೀಂದ್ರನಾಥ, ಸಾಗರ ಇವರು ನಡೆಸಿಕೊಟ್ಟರು. ಸಂಯುಕ್ತ ಸಹಕಾರಿಯ ಲೆಕ್ಕಪರಿಶೋಧಕರಾದ ಶ್ರೀ ಮಧುಕರ ಹೆಗಡೆ ಹಾಗೂ ಸಹಕಾರ ಇಲಾಖೆಯ ಜಂಟಿ ನಿಬಂಧಕರಾದ ಕೆ ಎಸ್ ನವೀನ್ ಚಾರ್ಟರ್ಡ್ ಅಕೌಂಟಂಟ್‌ಗಳ ಪ್ರಶ್ನೆಗಳಿಗೆ ಉತ್ತರಿಸಿದರು. ಕಾರ್ಯಕ್ರಮದಲ್ಲಿ ರಾಜ್ಯದ ವಿವಿಧ ಭಾಗಗಳಿಂದ ಆಗಮಿಸಿದ್ದ 68 ಚಾರ್ಟರ್ಡ್ ಅಕೌಂಟಂಟ್‌ಗಳು ಭಾಗವಹಿಸಿದ್ದರು.

# ಸಹಕಾರಿ ರಂಗದ ಮೇಲೆ ಗದಾ ಪ್ರಹಾರ

ಭಾರತದ ಸಹಕಾರಿ ರಂಗಕ್ಕೆ ಶತಮಾನದ ಇತಿಹಾಸವಿದೆ. ವಿಶ್ವದಾದ್ಯಂತ ಮನ್ನಣೆ ಪಡೆದಿರುವ ಈ ಕ್ಷೇತ್ರ ಇದೀಗ ಹಂತ ಹಂತವಾಗಿ ಪೈಪೋಟಿಯುಕ್ತ ವಾತಾವರಣದಲ್ಲಿ ಏಳುಬೀಳುಗಳನ್ನು ಕಾಣುತ್ತಿದೆ. ಇದರೊಂದಿಗೆ ಕೇಂದ್ರ ಸರಕಾರ ಜಾರಿಗೆ ತರಲು ಇಚ್ಛಿಸಿರುವ ನೇರ ತೆರಿಗೆ ಸಂಹಿತೆ – 2010 ಈ ಕ್ಷೇತ್ರಕ್ಕೆ ಒಂದು ಬಹು ದೊಡ್ಡ ಸವಾಲಾಗಿ ಹೊರಹೊಮ್ಮುತ್ತಿದೆ. ದೇಶದ ತೆರಿಗೆ ಸಂಹಿತೆ 2010ರಲ್ಲಿ ಸಹಕಾರಿ ಕ್ಷೇತ್ರವನ್ನೂ ಒಳಪಡಿಸಿದೆ. ಪರಿಣಾಮವಾಗಿ ಸಹಕಾರಿ ಸಂಸ್ಥೆಗಳ ಉಳಿವಿಗಾಗಿ ಹೋರಾಟ ಮಾಡಲೇಬೇಕಾದ ಅನಿವಾರ್ಯತೆ ಒದಗಿಬಂದಿದೆ.

**ನೇರ ತೆರಿಗೆ ಸಂಹಿತೆ–2010ರಲ್ಲೇನಿದೆ?**

ಪ್ರಕೃತ ಯಾವುದೇ ಸಂಹಿತೆ ವಿನಾಯಿತಿ ಇದೆ. ಆದರೆ ಬರಲಿರುವ ನೂತನ ಸಂಹಿತೆಯಲ್ಲಿ ಇದಕ್ಕೆ ಅವಕಾಶವಿಲ್ಲ.

ನೂತನ ತೆರಿಗೆ ಸಂಹಿತೆಯ ಪ್ರಕಾರ ಮರು ಪಾವತಿಯಾಗದ, ಮರುಪಾವತಿ ಬಗ್ಗೆ ಸಂಶಯವುಳ್ಳ ಯಾವುದೇ ಸಾಲದ ಸರಾಸರಿ ಶೇ.1ರಷ್ಟನ್ನು ತೆರಿಗೆಯಿಂದ ಹೊರಗಿಡಲು ಅವಕಾಶವಿದ್ದರೂ ಈ ಸೌಲಭ್ಯ ಸಹಕಾರಿ ಸಂಸ್ಥೆಗಳಿಗಿಲ್ಲ. ಆದರೆ ಈ ಸೌಲಭ್ಯ ವಾಣಿಜ್ಯ ಬ್ಯಾಂಕ್‌ಗಳಿಗೆ ಲಭ್ಯವಿದೆ. ಇದರೊಂದಿಗೆ ಈ ಸಾಲಗಳ ಮೇಲೆ ವಿಧಿಸುವ ಬಡ್ಡಿಗೂ ತೆರಿಗೆ ಅನ್ವಯವಾಗುವುದು.

ತೆರಿಗೆ ಸಂಹಿತೆಯ 80ಪಿ ವಿಭಾಗದ ಪ್ರಕಾರ ಈ ಮೊದಲು ಶೇ.100ರ ವಿನಾಯಿತಿ ಸಹಕಾರಿ ಸಂಸ್ಥೆಗಳ ಆದಾಯಕ್ಕಿತ್ತು. ಆದರೆ ಬರಲಿರುವ ತೆರಿಗೆ ಸಂಹಿತೆ–2010 ವಿಭಾಗ 85 ಮತ್ತು 86ರ ಪ್ರಕಾರ ಈ ವಿನಾಯಿತಿ ಕೇವಲ ಕೃಷಿ ಸಂಬಂಧಿ ಚಟುವಟಿಕೆಗಳ ಸಹಕಾರಿ ಸಂಸ್ಥೆಗಳಿಗೆ ಮಾತ್ರ ಲಭ್ಯ ಮತ್ತದರಿಂದ ಕೃಷಿ ಉತ್ಪನ್ನಗಳ ಸಂಸ್ಕರಣಾ ಸಂಸ್ಥೆಗಳನ್ನು ಹೊರಡಗಿಡಲಾಗಿದೆ.

ಈ ಮೊದಲು ತೆರಿಗೆ ಸಂಹಿತೆಯ 80 ಪಿ ವಿಭಾಗದ ಪ್ರಕಾರ ಸಹಕಾರಿ ಸಂಸ್ಥೆಗಳಿಸುವ ಬಡ್ಡಿ ಪಾಲು ಬಂಡವಾಳಕ್ಕೆ ದೊರಕುವ ಪ್ರತಿಫಲ, ಶೇಖರಣಾ ವ್ಯವಸ್ಥೆಯ ಮೇಲಿನ ಬಾಡಿಗೆ ಆದಾಯ ಇವೆಲ್ಲವೂ ತೆರಿಗೆಯಿಂದ ಮುಕ್ತಿ ಪಡೆದಿದ್ದವು. ಆದರೆ ಬರಲಿರುವ ಸಂಹಿತೆಯಲ್ಲಿ ಇವಾವುದಕ್ಕೂ ತೆರಿಗೆ ವಿನಾಯಿತಿ ಇರುವುದಿಲ್ಲ.

ನೇರ ತೆರಿಗೆ ಸಂಹಿತೆ – 2010ರ ಪ್ರಕಾರ ಇನ್ನು ಮುಂದೆ ಅಂದರೆ ಜಾರಿಯಾದ ಬಳಿಕ(2012 ಏಪ್ರಿಲ್) ಸದಸ್ಯರ ಠೇವಣಿಗೆ ಸಹಕಾರಿ ಸಂಸ್ಥೆ ಕೊಡುವ ಬಡ್ಡಿಯ ಮೊತ್ತ ತೆರಿಗೆಗೆ ಒಳಪಡಲಿದೆ. ಉದಾಹರಣೆಗೆ, ವಾರ್ಷಿಕ ಠೇವಣಿ ಮೇಲೆ ರೂ.ಹತ್ತುಸಾವಿರಕ್ಕಿಂತ ಹೆಚ್ಚು ಬಡ್ಡಿ ದೊರಕುವುದಿದ್ದಲ್ಲಿ ಆ ಮೊತ್ತವನ್ನು ಠೇವಣಿದಾರನಿಗೆ ಕೊಡುವ ಮೊದಲು ನಿಗದಿಪಡಿಸಿದ ತೆರಿಗೆಯನ್ನು ಮೂಲದಿಂದ ತೆರಿಗೆಯನ್ನು ಮೂಲದಿಂದ ತೆಗೆಯಬೇಕು. ಪರಿಣಾಮವಾಗಿ ಸಂಸ್ಥೆಗಳಿಗೆ ಬರಬಹುದಾದ ಠೇವಣಿಯ ಕುಸಿತಕ್ಕೆ ಅವಕಾಶಗಳು ಸೃಷ್ಟಿಯಾಗಬಹುದು.

ಸಹಕಾರಿ ಸಂಸ್ಥೆಯಿಂದ ಸದಸ್ಯನೋರ್ವ ಪಡೆಯುವ ಸಾಲದ ಮೇಲಿನ ಬಡ್ಡಿ ಕೂಡ ನೇರ ತೆರಿಗೆ ಸಂಹಿತೆ–2010ರ ಪ್ರಕಾರ ತೆರಿಗೆಗೆ ಒಳಪಡಲಿದೆ. ಇದರಿಂದಾಗಿ ಗ್ರಾಮೀಣ ಪ್ರದೇಶದಲ್ಲಿರುವ ಅನಕ್ಷರಸ್ಥರಿಗೆ ಲೆಕ್ಕಾಚಾರಗಳ ಬಗ್ಗೆ ವೃತ್ತಿಪರರ ಮಾರ್ಗದರ್ಶನವೂ ಸಿಗದೆ ಸಂಕಷ್ಟ ಕೊಳ್ಳಗಾಗಬಹುದು.

ಒಟ್ಟಾರೆಯಾಗಿ ಸಹಕಾರಿ ಸಂಘಗಳ ಆದಾಯದ ಮೇಲೆ ಶೇ.33 ತೆರಿಗೆ ವಿಧಿಸುವ ಪ್ರಸ್ತಾಪ ಬರಲಿರುವ ನೇರ ತೆರಿಗೆ ವಿಧಿಸುವ ಪ್ರಸ್ತಾಪ – 2010ರಲ್ಲಿದ್ದು ಇಲ್ಲಿ ಈ ಸಂಸ್ಥೆಗಳ ಪ್ರತಿಯೊಂದು ವ್ಯವಹಾರದ ಮೇಲೂ ಸೇವಾ ತೆರಿಗೆಯನ್ನು ವಿಧಿಸುವ ಪ್ರಸ್ತಾಪವೂ ಇದೆ. 2012ರ ಏಪ್ರಿಲ್‌ನಲ್ಲಿ ಜಾರಿಯಾಗಲಿರುವ ಈ ಮಸೂದೆಯ ಸಹಕಾರಿ ಕ್ಷೇತ್ರವನ್ನೂ ಅಲುಗಾಡಿಸಲಾರಂಭಿಸಿದೆ. ಈಗಾಗಲೇ ನಮ್ಮ ಸಹಕಾರಿ ರಂಗ ಅಳಿವು– ಉಳಿವಿನ ನಡುವೆ ಹೋರಾಟ ಮಾಡುತ್ತಿದ್ದು ಈ ದೃಷ್ಟಿಯಿಂದ ಸೂಕ್ತ ಪರಿಹಾರಗಳು ಬೇಕಿವೆ.



**ನಮ್ಮಲ್ಲಿರುವ ಸಹಕಾರಿ ಸಂಸ್ಥೆಗಳಲ್ಲಿ ಬಹುಪಾಲು ಸರಕಾರದ ಒಂದಿಲ್ಲೊಂದು ಹಿಡಿತದಲ್ಲಿದ್ದು ಪರಿಣಾಮವಾಗಿ ಇದರ ಜರಪರ ನೀತಿಗಳಿಂದಾಗಿ ಕಡಿಮೆ ಬಡ್ಡಿದರದಲ್ಲಿ ಸಾಲ, ಸಾಲಮನ್ನಾ, ಬಡ್ಡಿ ಮನ್ನಾ ಇವೆಲ್ಲ ಇವುಗಳ ಆದಾಯಕ್ಕೆ ಹೊಡೆತ ಕೊಟ್ಟು ಸೋಲಿನ ಸುಳಿಗೆ ತಲುಪಿದ್ದು ಇದೀಗ ಕೇಂದ್ರ ಸರಕಾರದ ನೂತನ ತೆರಿಗೆ ನೀತಿ ಇಲ್ಲಿಗೆ ಇನ್ನಷ್ಟು ಹೊಡೆತ ಕೊಡಬಹುದು. ಈ ನಿಟ್ಟಿನಲ್ಲಿ ಇದಕ್ಕೆ ಪರಿಹಾರ ಬೇಕಿದೆ.**

ನೇರ ತೆರಿಗೆ ಸಂಹಿತೆ – 2010ರ ಪ್ರಕಾರ ಎಲ್ಲಾ ರೀತಿಯ ಸಹಕಾರ ಸಂಘಗಳಿಗೂ ತೆರಿಗೆ ಪ್ರಸ್ತಾಪನೆ ಬರಲಿದೆ. ಇಲ್ಲಿ ನಗರ ಸಹಕಾರಿ ಸಂಸ್ಥೆ, ಕೃಷಿಯುತ್ಪನ್ನ ಮಾರಾಟ ಸಹಕಾರಿ ಸಂಸ್ಥೆ ಇವೆಲ್ಲ ಸೇರಲಿವೆ. ನಮ್ಮಲ್ಲಿರುವ ಸಹಕಾರಿ ಸಂಸ್ಥೆಗಳಲ್ಲಿ ಬಹುಪಾಲು ಸರಕಾರದ ಒಂದಿಲ್ಲೊಂದು ಹಿಡಿತದಲ್ಲಿದ್ದು ಪರಿಣಾಮವಾಗಿ ಇದರ ಜರಪರ ನೀತಿಗಳಿಂದಾಗಿ ಕಡಿಮೆ ಬಡ್ಡಿದರದಲ್ಲಿ ಸಾಲ, ಸಾಲಮನ್ನಾ, ಬಡ್ಡಿ ಮನ್ನಾ ಇವೆಲ್ಲ ಇವುಗಳ ಆದಾಯಕ್ಕೆ ಹೊಡೆತ ಕೊಟ್ಟು ಸೋಲಿನ ಸುಳಿಗೆ ತಲುಪಿದ್ದು ಇದೀಗ ಕೇಂದ್ರ ಸರಕಾರದ ನೂತನ ತೆರಿಗೆ ನೀತಿ ಇಲ್ಲಿಗೆ ಇನ್ನಷ್ಟು ಹೊಡೆತ ಕೊಡಬಹುದು. ಈ ನಿಟ್ಟಿನಲ್ಲಿ ಇದಕ್ಕೆ ಪರಿಹಾರ ಬೇಕಿದೆ.

- ಪ್ರಸ್ತಾಪಿತ ಶೇ.33ರ ತೆರಿಗೆಯನ್ನು ಕೈಬಿಡುವುದು.
- ಸೇವಾ ತೆರಿಗೆಯಿಂದ ವಿನಾಯಿತಿ.
- ಚಾಲ್ತಿಯಲ್ಲಿರುವ ನೇರ ತೆರಿಗೆ ವಿಭಾದ 80 ಪಿಯ ಎಲ್ಲಾ ಸೌಲಭ್ಯಗಳ ವಿಸ್ತರಣೆ.
- ವಾಣಿಜ್ಯ ಬ್ಯಾಂಕ್‌ಗಳಿಗೆ ಹೆಸರಿಸಿರುವ ಎಲ್ಲಾ ಸೌಲಭ್ಯಗಳನ್ನು ಸಹಕಾರಿ ಸಂಸ್ಥೆಗಳಿಗೂ ವಿಸ್ತರಿಸುವುದು.
- ಲಾಭ ಮತ್ತು ನಷ್ಟ ಖಾತೆಯ ಮೇಲೆ ಶೇ.100ರ ತೆರಿಗೆ ವಿನಾಯಿತಿ.
- ಬಡ್ಡಿ ಮೇಲೆ ವಿಧಿಸುವ ಮೂಲ ಆದಾಯದ ಮೇಲಿನ ತೆರಿಗೆಯಡಿ ವಿನಾಯಿತಿ.

ಲೇವಾದೇವಿಗಾರರಿಂದ ಮುಕ್ತಿ ಪಡೆಯಲು, ಗ್ರಾಮೀಣ ಪ್ರದೇಶದ ಜನರಲ್ಲಿ ಉಳಿತಾಯದ ಪ್ರವೃತ್ತಿ ಸೃಷ್ಟಿಸಲು ಮತ್ತು ಅವರ ಜೀವನ ಮಟ್ಟ ಸುಧಾರಿಸಲು ಹುಟ್ಟಿಕೊಂಡ ಸಹಕಾರಿ ಸಂಘಗಳು ಗ್ರಾಮೀಣ ಭಾರತದ ಜೀವಾಳ. ಇವುಗಳ ಬೆಳವಣಿಗೆಗೆ ಪ್ರೋತ್ಸಾಹ ದೊರಕಬೇಕೆ ಹೊರತು ಪ್ರಹಾರಗಳಲ್ಲ, ನಮ್ಮ ಸಹಕಾರಿ ವ್ಯವಸ್ಥೆ, ಸರಕಾರದ ಹಸ್ತಕ್ಷೇಪ, ಆಡಳಿತ ವೈಫಸಲ್ಯ, ಮರುಪಾವತಿಯಾಗದ ಸಾಲ, ವೃತ್ತಿಪರತೆಯ ಕೊರತೆ ಮುಂತಾದ ಸಮಸ್ಯೆಗಳಿಂದ ಕೂಡಿದ್ದರೂ ಅಲ್ಪಸ್ವಲ್ಪ ಲಾಭದಲ್ಲಿ ಮುನ್ನಡೆಯುತ್ತಿದೆ. ಈ ಸಮಯದಲ್ಲಿ ಇವು ನಾನಾ ರೀತಿಯ ತೆರಿಗೆಗೊಳಪಟ್ಟಲ್ಲಿ ಸಹಕಾರಿ ತತ್ವಕ್ಕೆ ಬೆಲೆಯಿಲ್ಲದಾಗಿ ಗ್ರಾಮೀಣ ಭಾಗದ ಜನರ ಹಣಕಾಸಿನ ವ್ಯವಸ್ಥೆ ವಾಲುವಂತಾಗಬಹುದು. ಈ ದೃಷ್ಟಿಯಿಂದ ಬರಲಿರುವ ಸಮಸ್ಯೆಗೆ ಈಗಿಂದೀಗಲೇ ಪರಿಹಾರ ಕಂಡುಕೊಳ್ಳುವುದು ಸೂಕ್ತ.

–ಕೃಪೆ ಉದಯವಾಣಿ

# ಸಹಕಾರ ಕ್ಷೇತ್ರಕ್ಕೆ ನೇರ ತೆರಿಗೆ ಪದ್ಧತಿ ಜಾರಿಗೆ ವಿರೋಧಿಸಿ ಪ್ರತಿಭಟನೆ

## ಸಹಕಾರ ಭಾರತಿ ಕರ್ನಾಟಕ ನೇತೃತ್ವದಲ್ಲಿ ರಾಜ್ಯದ ಎಲ್ಲ ಜಿಲ್ಲಾ ಕೇಂದ್ರಗಳಲ್ಲಿ ಜಿಲ್ಲಾಧಿಕಾರಿಗಳಿಗೆ ಮನವಿ ಸಲ್ಲಿಕೆ



ಕೇಂದ್ರ ಸರಕಾರ ಜಾರಿಗೆ ತರಲು ಉದ್ದೇಶಿಸಿರುವ ಸಹಕಾರ ಕ್ಷೇತ್ರಕ್ಕೂ ಅನ್ವಯಿಸುವಂತೆ ನೇರ ತೆರಿಗೆ ಪದ್ಧತಿ ಜಾರಿಗೆ ಕೊಡುವುದನ್ನು ವಿರೋಧಿಸಿ ಸಹಕಾರ ಭಾರತಿ ನೇತೃತ್ವದಲ್ಲಿ ರಾಜ್ಯದಾದ್ಯಂತ ಪ್ರತಿಭಟನೆ ನಡೆಸಿ ಎಲ್ಲ ಜಿಲ್ಲಾಧಿಕಾರಿಗಳಿಗೆ ಮನವಿಯನ್ನು ಸಲ್ಲಿಸಲಾಯಿತು.

ಮಂಗಳೂರಿನಲ್ಲಿ ಸಹಕಾರ ಭಾರತೀಯ ರಾಷ್ಟ್ರೀಯ ಉಪಾಧ್ಯಕ್ಷ ಹಾಗೂ ಕ್ಯಾಮ್ಕೋ ಅಧ್ಯಕ್ಷ ಶ್ರೀ ಕೊಂಕೋಡಿ ಪದ್ಮನಾಭ, ಸಂಯುಕ್ತ ಸಹಕಾರಿಯ ಅಧ್ಯಕ್ಷ ಶ್ರೀ ಎಸ್. ಆರ್.ಸತೀಶಚಂದ್ರ, ಶಾಸಕ ಶ್ರೀ ಗಣೇಶ ಕಾರ್ನಿಕ, ಶ್ರೀ ರಾಧಾಕೃಷ್ಣಕೋಟೆ ಮುಂತಾದವರು ಮತ್ತು ಅನೇಕ ಸಹಕಾರಿ ಗಣ್ಯರು ಉಪಸ್ಥಿತರಿದ್ದು ಜಿಲ್ಲಾಧಿಕಾರಿಯವರಿಗೆ ಮತ್ತು ಸಂಸದ ಶ್ರೀ ನಳಿನಕುಮಾರ ಕಟೀಲು ರವರಿಗೆ ಮನವಿ ಪತ್ರಗಳನ್ನು ಸಲ್ಲಿಸಲಾಯಿತು.

ಗಂಗಾವತಿಯಲ್ಲಿ ಸಂಯುಕ್ತ ಸಹಕಾರಿಯ ನಿರ್ದೇಶಕ ಶ್ರೀ ಸಣ್ಣ ಸೂಗಪ್ಪ ಹಾಗೂ ಸಹಕಾರ ಭರತಿ ಅಧ್ಯಕ್ಷ ಶ್ರೀ ಅಕ್ಕಿ ಮಲ್ಲಿಕಾರ್ಜುನ ಹಾಗೂ ಅನೇಕ ಹಿರಿಯ ಸಹಕಾರಿ ಮುಖಂಡರ ನೇತೃತ್ವದಲ್ಲಿ,ವಿಜಾಪೂರದಲ್ಲಿ ಸಿದ್ಧಸಿರಿ ವ್ಯವಸ್ಥಾಪಕ ನಿರ್ದೇಶಕ ಶ್ರೀ ಶಂಕರಗೌಡ ಪಾಟೀಲ ನೇತ್ರದಲ್ಲಿ ಅನೇಕ ಸಹಕಾರಿ ಮುಖಂಡರು ಸೇರಿ ಸಲ್ಲಿಸಿದರು. ಉಡುಪಿ ಜಿಲ್ಲೆಯಲ್ಲಿ ಸಂಯುಕ್ತ ಸಹಕಾರಿ ನಿರ್ದೇಶಕ ಶ್ರೀ ಭಾಸ್ಕರ ಕಾಮತ ಹಾಗೂ ಜಿಲ್ಲಾ ಸಂಚಾಲಕ ಶ್ರೀ ರವಿರಾಜ ಹೆಗಡೆ ನೇತೃತ್ವದಲ್ಲಿ ಗದಗನಲ್ಲಿ ಶ್ರೀ ನೀಲಕಂಟೇಶ್ವರ ಪತ್ತಿನ ಸೌಹಾರ್ದ ಸಹಕಾರಿಯ ನೇತೃತ್ವದಲ್ಲಿ , ಘಟಪ್ರಭಾದಲ್ಲಿ ಶ್ರೀ ಭಾಗ್ಯಲಕ್ಷ್ಮಿ ಪತ್ತಿನ ಸೌಹಾರ್ದ ಸಹಕಾರಿಯ ನೇತ್ರತ್ವದಲ್ಲಿ , ಹಾಗೆಯೆ ವೀರಶೈವ ಪಂಚಮಸಾಲಿ ಸೌಹಾರ್ದ ಪತ್ತಿನ ಸಹಕಾರಿ




ನಿ ಗದಗ,ಸುರಭಿ ಸೌಹಾರ್ದ ಕ್ರೆಡಿಟ್ ಕೋಆಪರೇಟಿವ ಬೆಂಗಳೂರು, ಸ್ವಯಂಕೃಷಿ ಸೌಹಾರ್ದ ಕ್ರೆಡಿಟ್ ಕೊ-ಆಪರೇಟಿವ್ ಬೆಂಗಳೂರು, ಜ್ಞಾನಶಾಲೆ ಸೌಹಾರ್ದ ಕ್ರೆಡಿಟ್ ಕೋಆಪರೇಟಿವ್ ಬೆಂಗಳೂರು,ಶ್ರೀಮಾತಾ ವೈಭವಲಕ್ಷ್ಮೀ ಸೌಹಾರ್ದ ಸಹಕಾರಿ ನಿ ಕುಮಟಾ, ಯೂ. ಕೆ.ಸೌಹಾರ್ದ ಕೋ-ಆಪರೇಟಿವ್ ಯಲ್ಲಾಪುರ,ಎಸ್. ಎಲ್.ವಿ ಸೌಹಾರ್ದ ಪತ್ತಿನ ಸಹಕಾರಿ ನಿ ಬೆಂಗಳೂರು, ದಿ ಸುವರ್ಣ ಕರ್ನಾಟಕ ಕ್ರೆಡಿಟ್ ಸೌಹಾರ್ದ ಸಹಕಾರಿ ಬೆಂಗಳೂರು, ಶುಭೋದಯ ಸೌಹಾರ್ದ ಸಹಕಾರಿ ನಿ ಶಿರಸಿ,ಶ್ರೀ ವಾಸವಿ ವಿವಿಧೋದ್ದೇಶ ಸೌಹಾರ್ದ ಸಹಕಾರಿ ನಿ ಕೊಳ್ಳೇಗಾಲ, ಶ್ರೀ ವಾಸವಿ ಪತ್ತಿನ ಸೌಹಾರ್ದ ಸಹಕಾರಿ ನಿ ಕಾರಟಗಿ, ಮಿತ್ರಾ ಸೌಹಾರ್ದ ಸಹಕಾರಿ ನಿ ಹೊಸಪೇಟೆ ಇನ್ನೂ ಅನೇಕ ಸೌಹಾರ್ದ ಸಹಕಾರಿಗಳು ಜಿಲ್ಲಾಧಿಕಾರಿಗಳಿಗೆ ಮನವಿ ಕಳಿಸಿರುವುದಾಗಿ ತಿಳಿಸಿದ್ದಾರೆ. ಪತ್ರಿಕೆಗಳಲ್ಲಿ ಹಾಗೂ ಮಾಧ್ಯಮಗಳಲ್ಲೂ ಈ ಬಗ್ಗೆ ವ್ಯಾಪಕ ಪ್ರಚಾರ ನೀಡಲಾಗಿದೆ.

ರಾಜ್ಯದ ಸಂಸದ ಸದಸ್ಯರು ಈ ಬಗ್ಗೆ ಕೇಂದ್ರದಲ್ಲಿ ಮಾನ್ಯ ಪ್ರಧಾನ ಮಂತ್ರಿಗಳಿಗೆ ಹಾಗೂ ಮಾನ್ಯ ಹಣಕಾಸು ಮಂತ್ರಿಗಳಿಗೆ ಮನವರಿಕೆ ಮಾಡಿಕೊಡಬೇಕೆಂದು ಕೋರಲಾಗಿದೆ.

ಕೇಂದ್ರ ಸರಕಾರವು ಸಹಕಾರ ಸಂಘಗಳಿಗೆ ವಿಧಿಸಲಿರುವ ಈ ನೇರ ತೆರಿಗೆ ಪದ್ಧತಿಯನ್ನು ಕೈಬಿಡುವಂತೆ ಆಗ್ರಹಿಸಿ ಬೆಳಗಾವಿಯಲ್ಲಿ ಅಗಷ್ಟ ಮಾಹೆಯಲ್ಲಿ ಸಹಕಾರಿಗಳ ಕಾರ್ಯಕ್ರಮವನ್ನು ನಡೆಸಲಾಗುವುದೆಂದು ಸಂಯುಕ್ತ ಸಹಕಾರಿ ಅಧ್ಯಕ್ಷ ಶ್ರೀ ಎಸ್.ಆರ್.ಸತೀಶಚಂದ್ರವರು ತಿಳಿಸಿದ್ದಾರೆ.



